# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 02-01-2018ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಮಹದೇವ. ಎಂ. – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಎಂ. ಆನಂದ್ – ಸದಸ್ಯರು | ಉಪ ಆಯುಕ್ತರು (ಪೂರ್ವ), |
| ಉಮಾ. ಎನ್ – ಸದಸ್ಯರು | ಮುಖ್ಯ ಅಭಿಯಂತರರು (ಮಹದೇವಪುರ) |
| ಮಂಜುಳ ವಿಜಯಕುಮಾರ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಶಾಂತಿನಗರ), (ರ.ಮೂ.ಸೌ–ಯಲಹಂಕ), (ಘನತ್ಯಾಜ್ಯನಿರ್ವಹಣೆ), |
| ಅನ್ವರ್ ಪಾಷ. ಎಸ್ – ಸದಸ್ಯರು | |
| ಆಂಜನಪ್ಪ. ಎಂ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ |
| ಕೆ.ಗಣೇಶ್ ರಾವ್ ಮಾನೆ – ಸದಸ್ಯರು | ಉಪ ಅರಣ್ಯ ಸಂರಕ್ಷಣಾಧಿಕಾರಿ |
| ದಾಸೇಗೌಡ. ಸಿ – ಸದಸ್ಯರು | ಉಪ ನಿಯಂತ್ರಕರು (ಹಣಕಾಸು–ಯಲಹಂಕ), |
| ಶಿವಕುಮಾರ್. ಕೆ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೊಡಿಗೆಹಳ್ಳಿ) |
| ಎಂ. ವೆಂಕಟೇಶ್ (ಸಂಗಾತಿ) – ಸದಸ್ಯರು | |
| ಹೆಚ್.ಸಿ. ನಾಗರತ್ನ ರಾಮಮೂರ್ತಿ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆಃ ತೆಆಸ್ಥಾಸ/86/2017-18*

ಪ್ರಧಾನ ಅಭಿಯಂತರರ ದಿನಾಂಕ: 22-08-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾರುತಿಸೇವಾನಗರ ಉಪ ವಿಭಾಗದ ವಾರ್ಡ್ ಸಂಖ್ಯೆ: 59ರಲ್ಲಿ 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3166 ಅಡಿಯಲ್ಲಿ ಸದರಿ ವಾರ್ಡ್‌ಗೆ ರೂ.200.00 ಲಕ್ಷಗಳ ಅನುದಾನ ನಿಗಧಿ ಪಡಿಸಿದ್ದು ಪಾಲಿಕೆ ಸದಸ್ಯರಾದ ಶ್ರೀಮತಿ ಹಾನ್ನಾ ಭುವನೇಶ್ವರಿ ರವರು ಮಾನ್ಯ ಆಯುಕ್ತರವರಿಗೆ ದಿ: 21-04-2017 ರಂದು ಪತ್ರ ಬರೆದು ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿದ್ದು, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಜಾಬ್‌ಸಂಖ್ಯೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

| SL. No. | Name of work | Rs. Lakhs |
|---|---|---|
| 01 | Improvements to Roads and Drains at D Street Machalibetta in ward No.59 Maruthi Seva nagara | 20.00 |
| 02 | Improvements to Roads, Drains and culverts at Venkatamma Layout, Post Office Road in ward No.59 Maruthi Seva nagara | 20.00 |
| 03 | Improvements to Roads and Drains at Tyagaraja Layout, 1st cross in ward No.59 Maruthi Seva nagara | 20.00 |

| | | |
|---|---|---|
| 04 | Improvements to Roads and Drains at Jai Bharath Nagara, 5th cross in ward No.59 Maruthi Seva nagara | 20.00 |
| 05 | Improvements to Roads and Drains at New Ihimmaiah Road in ward No.59 Maruthi Seva nagara | 20.00 |
| 06 | Improvements to Roads and Drains at Nanjundappa Garden Road in ward No.59 Maruthi Seva nagara | 20.00 |
| 07 | Improvements to Roads and Drains at Rama Temple Road in ward No.59 Maruthi Seva nagara | 20.00 |
| 08 | Improvements to Roads and Drains at Ramanna Road in ward No.59 Maruthi Seva nagara | 20.00 |
| 09 | Improvements to RCC Roads and Drains at K.R. Garden 2nd stage in ward No.59 Maruthi Seva nagara | 20.00 |
| 10 | Construction of BBMP Gym Building at Muddappa Garden in ward No.59 Maruthi Seva nagara | 20.00 |
| | Total | 200.00 |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ 2016-17ನೇ ಸಾಲಿನ ಆಯವ್ಯಯದ ಪ್ರಕ್ರಿಯೆ ಮುಕ್ತಾಯವಾಗಿದ್ದು, 2016-17ರ ಆಯವ್ಯಯದಡಿ ಜಾಬ್‌ಸಂಖ್ಯೆ ನೀಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಪ್ರಧಾನ ಅಭಿಯಂತರರವರು ಪ್ರಸ್ತಾಪಿತ ಕಾಮಗಾರಿಯು ಅನುಷ್ಠಾನಗೊಳಿಸುವುದು ಅವಶ್ಯಕವಾಗಿರುದರಿಂದ 2017-18ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3166 ಅಡಿ ರೂ.200.00 ಲಕ್ಷಗಳ ಅನುದಾನವನ್ನು ಒದಗಿಸಿಕೊಂಡು ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮ ವಹಿಸಬಹುದಾಗಿದೆಂದು ಅಭಿಪ್ರಾಯಿಸಿದ್ದು, ಮಾನ್ಯ ಆಯುಕ್ತರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3166 ಅಡಿ ಜಾಬ್‌ಸಂಖ್ಯೆ ನೀಡುವುದನ್ನು ಸ್ಥಗಿತಗೊಳಿಸಿರುವುದರಿಂದ, ಮೇಲ್ಕಾಣಿಸಿದ 10 ಕಾಮಗಾರಿಗಳ ಒಟ್ಟು ಮೊತ್ತ ರೂ.200.00 ಲಕ್ಷಗಳಿಗೆ 2017-18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3166 ಅಡಿಯಲ್ಲಿ ಜಾಬ್‌ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***02]. ವಿಷಯದ ಸಂಖ್ಯೆ: ತೆಆಸ್ಥಾಸ/100/2017-18***

ಪ್ರಧಾನ ಅಭಿಯಂತರರ ದಿನಾಂಕ: 29.08.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ವಸತಿ ಸಚಿವರು ಹಾಗೂ ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ ರವರು ಈ ಕೆಳಕಂಡ ವಾರ್ಡ್ 134ರ ಬಾಪೂಜಿನಗರ ವ್ಯಾಪ್ತಿಯಲ್ಲಿ ಯು.ಜಿ.ಡಿ. ಸ್ಯಾನಿಟೇಷನ್ ಹಾಗೂ ಶೌಚಾಲಯ ನಿರ್ವಹಣೆಯ 4 ಕಾಮಗಾರಿಗಳ ಅಂದಾಜು ಮೊತ್ತ ರೂ.400.00 ಲಕ್ಷಗಳ ಕಾಮಗಾರಿಗಳನ್ನು ಸ್ವಚ್ಛ ಬಾರತ ಅನುದಾನದಲ್ಲಿ ಕೈಗೊಳ್ಳಲು ಮಾನ್ಯ ಆಯುಕ್ತರಲ್ಲಿ ಪತ್ರದ ಮೂಲಕ ಕೋರಿದ್ದು, ತದನಂತರ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರು ಸ್ಥಳದ ಅವಶ್ಯಕತೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl. No | Ward No | Name of Work | Es.Cost (Rs.in lakhs) | Job Code |
|---|---|---|---|---|
| 1 | 134 | ಬಾಪೂಜಿನಗರ ಅಡ್ಡರಸ್ತೆಗಳಿಗೆ ಹಾಗೂ ಅನಂತನಗರ ರಸ್ತೆಗಳಿಗೆ ಯು.ಜಿ.ಡಿ. ಪೈಪ್‌ಲೈನ್ ಅಳವಡಿಕೆ | 150.00 | 134–18–000001 |
| 2 | 134 | ಶಾಮಣ್ಣ ಗಾರ್ಡನ್ ಅಡ್ಡರಸ್ತೆಗಳಿಗೆ ಹಾಗೂ ಮುತ್ತಾಂಜನೇಯ ದೇವಸ್ಥಾನದ ರಸ್ತೆಗಳಿಗೆ ಯು.ಜಿ.ಡಿ ಪೈಪ್‌ಲೈನ್ ಅಳವಡಿಕೆ | 50.00 | 134–18–000002 |
| 3 | 134 | ಹೊಸಗುಡ್ಡದಹಳ್ಳಿ ಹಾಗೂ ಮಂಜುನಾಥನಗರ ರಸ್ತೆಗಳಿಗೆ ಯು.ಜಿ.ಡಿ ಪೈಪ್‌ಲೈನ್ ಅಳವಡಿಕೆ | 50.00 | 134–18–000003 |
| 4 | 134 | ಶೋಭಾ ಚಿತ್ರಮಂದಿರ ರಸ್ತೆಗಳಿಗೆ ಹಾಗೂ ಇರಾ ಮಸೀದಿ ರಸ್ತೆಗಲಿಗೆ ಯು.ಜಿ.ಡಿ ಪೈಪ್‌ಲೈನ್ ಅಳವಡಿಕೆ | 150.00 | 134–18–000004 |

ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಆದೇಶ ಸಂಖ್ಯೆ ಪೌನಿ:18:ಘ.ವ.ನಿ:2015–16, ದಿನಾಂಕ: 06.05.216ರಲ್ಲಿ ಬಿ.ಬಿ.ಎಂ.ಪಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಕೇಂದ್ರದ ಪಾಲಿನ ರೂ.81.66 ಕೋಟಿಗಳು ಹಾಗೂ ರಾಜ್ಯದ ಪಾಲಿನ ಅನುದಾನ ರೂ.27.22 ಕೋಟಿಗಳು ಒಟ್ಟಾರೆ ರೂ.108.88 ಕೋಟಿಗಳ ಅನುದಾನಕ್ಕೆ ಅರ್ಹರಾಗಿರುತ್ತದೆ. ರೂ.108.88 ಕೋಟಿಗಳ ಪೂಕಿ ರೂ41.15 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಜಂಟಿ ಆಯುಕ್ತರು (SWM) ರವರ ಪತ್ರ ಸಂಖ್ಯೆ: ಜ.ಆ(ಘ.ತ್ಯಾ.ನಿ) ಪಿಆರ್/ಎಫ್–439/ ದಿನಾಂಕ: 16.06.2016ರಲ್ಲಿ 2015–16ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ–3112 ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಕೈಗೊಳ್ಳಲಾದ ರೂ.41.15 ಕೋಟಿಗಳಿಗೆ UC ಯನ್ನು ಲಗತ್ತಿಸಿ. ಉಳಿದ ರೂ.67.73 ಕೊಟಿಗಳ ಅನುದಾನವನ್ನು ಬಿಡುಗಡೆ ಮಾಡಲು ವಿನಂತಿಸಿರುತ್ತಾರೆ. 2016–17ನೇ ಸಾಲಿನಲ್ಲಿ ಪಿ–3112 ಅಡಿ ರೂ.56.69 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಸರ್ಕಾರದಿಂದ ಮೇಲ್ಕಂಡ ಅನುದಾನ ನಿರೀಕ್ಷಿಸಿ ಸರ್ಕಾರದಿಂದ ಬಿಡುಗಡೆಯಾಗುವ ರೂ.67.73 ಕೋಟಿಗಳಲ್ಲಿ ರೂ.15.54 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ವಾರ್ಡ್ ಸಂಖ್ಯೆ: 134ರ ರೂ.400.00 ಲಕ್ಷಗಳ ಕಾಮಗಾರಿಗಲಿಗೆ ಸಂಬಂಧಿಸಿದಂತೆ ಕಾ.ಪಾ.ಅ (SWM) ಮತ್ತು ಜಂಟಿ ಆಯುಕ್ತರು (SWM and Health) ರವರು ಸರ್ಕಾರದಿಂದ ಬಿಡುಗಡೆಯಾಗುವ ರೂ.67.73 ಕೋಟಿಗಳಲ್ಲಿ ಜಾಬ್‌ಸಂಖ್ಯೆ ನೀಡಲು ಕೋರಿದ್ದು, ಮಾನ್ಯ ಆಯುಕ್ತರು ಜಾಬ್‌ಸಂಖ್ಯೆ ನೀಡಲು ಆದೇಶಿಸಿರುತ್ತಾರೆ. 2017–18ರ ಆಯವ್ಯಯದ ಪಿ–3112ರ Currents works ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುದಾನ ನಿರೀಕ್ಷಿಸಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆ ನಿರೀಕ್ಷಿಸಿ, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರ ಆದೇಶದಂತೆ 2017–18ರ ಪಿ–3112 ಅಡಿ ರೂ.400.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಆಯುಕ್ತರವರು ಆದೇಶಿಸಿದಂತೆ ಪಾಲಿಕೆ ಆಯವ್ಯಯ 2017–18ರ ಲೆಕ್ಕಶಿರ್ಷಿಕೆ ಪಿ–3112 ಅಡಿಯಲ್ಲಿ ಮೇಲ್ಕಾಣಿಸಿದ 04 ಕಾಮಗಾರಿಗಳ ಒಟ್ಟು ಮೊತ್ತ ರೂ.400.00 ಲಕ್ಷಗಳಿಗೆ ಸರ್ಕಾರದ ಅನುದಾನ ನಿರೀಕ್ಷಿಸಿ ಜಾಬ್‌ಸಂಖ್ಯೆ ನೀಡಿರುವ ಕ್ರಮದ ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 29–08–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ: ತೆಆಸ್ಥಾಸ/ 125 /2017-18*

ಪ್ರಧಾನ ಅಭಿಯಂತರರ ದಿನಾಂಕ: 25.09.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-08ರಲ್ಲಿ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0485 (Construction of Burial Grounds and brining Ghats with the approval of T&F Committee) ಅನುದಾನದಡಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ನೀಡಲು ಪ್ರಸ್ತಾವನೆ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl No | P-Code | Name of work | Est cost (In Lakhs) |
|---|---|---|---|
| 1 | P-0485 | Development of Burial Ground at Kodigehalli village in ward No.08 | 50.00 |
| 2 | P-0485 | Improvements of Burial Ground at Kodigehalli village in ward No.08 | 50.00 |

ಅನುದಾನ ಲಭ್ಯತೆಯ ಬಗ್ಗೆ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ 2017-18ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0485 ಲಭ್ಯವಿರುವ ರೂ.4560.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 08ರ 02 ಕಾಮಗಾರಿಗಳ ಮೊತ್ತವಾದ ರೂ.100.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಾರ್ಡ್-08ರ ಮೇಲ್ಕಾಣಿಸಿದ 02 ಕಾಮಗಾರಿಗಳ ಒಟ್ಟು ಮೊತ್ತವಾದ ರೂ.100.00 ಲಕ್ಷಗಳಿಗೆ ಕ್ರಿಯಾ ಯೋಜನೆಗೆ ಅನುಮೋದನೆ ಮತ್ತು ಜಾಬ್‌ಕೋಡ್ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *04]. ವಿಷಯದ ಸಂಖ್ಯೆ: ತೆಆಸ್ಥಾಸ/ 144 /2017-18*

ಪ್ರಧಾನ ಅಭಿಯಂತರರರ ದಿನಾಂಕ: 13-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (07)ರಲ್ಲಿ ವಾರ್ಡ್ ನಂ.138ರಲ್ಲಿ ಕೈಗೊಳ್ಳಬೇಕಾದ ಕಾಮಗಾರಿಯಾದ Construction of Samudhaya bhavan at Flower Garden Rs.50.00 Lakhs ಗಳಿಗೆ ಅಂದಾಜು ಪಟ್ಟಿಯನ್ನು 2016-17ನೇ ಸಾಲಿನ ಲೋಕೋಪಯೋಗಿ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಿದ್ದು ಲೆಕ್ಕಶೀರ್ಷಿಕೆ-0472ರ ಅಡಿಯಲ್ಲಿ ಅನುವು ಮಾಡಲು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಚಾಮರಾಜಪೇಟೆ ಮತಕ್ಷೇತ್ರದ ಶಾಸಕರು ಪತ್ರ ದಿ: 28.07.2017 ರಂದು ಸದರಿ ಕಾಮಗಾರಿಗೆ ಅನುದಾನ ಒದಗಿಸಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (12) ರಲ್ಲಿ ಲೆಕ್ಕಶೀರ್ಷಿಕೆ ಪಿ-0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳ ಅನುದಾನವು ಲಭ್ಯವಿದ್ದು ಹಾಗೂ ಈ ಅನುದಾನಕ್ಕಾಗಿ ಸಮಿತಿಯ ಮುಂದೆ ಸಲ್ಲಿಸಲು ವರದಿ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್-138 ರಲ್ಲಿ ಮೇಲಿನ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳನ್ನು ಅನುವು ಮಾಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

***05]. ವಿಷಯದ ಸಂಖ್ಯೆ: ತೆಆಸ್ಥಾಸ/ 145 /2017-18***

ಪ್ರಧಾನ ಅಭಿಯಂತರರರ ದಿನಾಂಕ: 13-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.165ರ ವ್ಯಾಪ್ತಿಯಲ್ಲಿ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ-0055 (Encrochment clearance expenses demolition charges) ಅನುದಾನದಲ್ಲಿ ಪ್ರಸ್ತಾಪಿತ ಕಾಮಗಾರಿಯ ವಿವರ ಈ ಕೆಳಕಂಡಂತ್ತಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Detailed Estimate for the work of dismantling of residential building deviated portion at property no.545, 22nd A cross, bsk 2nd stage, Bangalore in ward no 165. | 5.00 |

ಪದ್ಮನಾಭ ವಿಧಾನಸಭಾಕ್ಷೇತ್ರದ ಬನಶಂಕರಿ ಉಪವಿಭಾಗದ ಮೇಲ್ಕಾಣಿಸಿ ಕಾಮಗಾರಿಗೆ ವಾರ್ಡ್ ನಂ.165ರ ಗಣೇಶ ಮಂದಿರ, ಬನಶಂಕರಿ 2ನೇ ಹಂತ, 22ನೇ ಅಡ್ಡರಸ್ತೆ, ನಿವೇಶನದ ಸಂಖ್ಯೆ: 545 ರಲ್ಲಿ ಮಂಜೂರಾದ ನಕ್ಷೆಯನ್ನು ಉಲ್ಲಂಘಿಸಿ ಅನಧಿಕೃತ ಕಟ್ಟಡ ನಿರ್ಮಿಸಿದ್ದು ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗೆ ಜಾಬ್‌ಕೋಡ್ ನೀಡಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು ಹಾಗೂ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯದಂತೆ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ.9.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಮೇಲ್ಕಂಡ ಮಾನ್ಯ ಆಯುಕ್ತರವರ ಆದೇಶದಂತೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರು ನಿರ್ಣಯಿಸಿದಂತೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ಘನನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಸ್ಪಷ್ಟಿಕರಣದೊಂದಿಗೆ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಸಮಿತಿರವರ ತೀರ್ಮಾನದಂತೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ವರದಿ ಮಾಡಿರುವಂತೆ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ದಾಖಲಾಗಿರುವ ಅಪೀಲು ಸಂಖ್ಯೆ: 450/2010ರ ಪ್ರಕರಣವು ದಿನಾಂಕ: 20.02.2016ರಂದು ಇತ್ಯಾರ್ಥಪಡಿಸಿ ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ.5.00 ಲಕ್ಷಗಳನ್ನು ಅಳವಡಿಸಿಕೊಂಡು ಸದರಿ ಕಾಮಗಾರಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

***06]. ವಿಷಯದ ಸಂಖ್ಯೆ: ತೆಆಸ್ಥಾಸ/ 150 /2017-18***

ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಮರ್ಪಕ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾಮಗಾರಿಗೆ ಸಂಬಂಧಿಸಿದಂತೆ ಖಾಲಿ ಇರುವ 114 ಘನತ್ಯಾಜ್ಯ ಪರಿವೀಕ್ಷಕರನ್ನು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಮೂಲಕ ಮಾನವ ಸಂಪನ್ಮೂಲ ಸಂಸ್ಥೆಯವರಿಂದ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸಕ್ಷಮ ಪ್ರಾಧಿಕಾರದಿಂದ

ಅನುಮೋದನೆ ಪಡೆದು ನಿಯೋಜಿಸಿಕೊಳ್ಳಲಾಗಿರುತ್ತದೆ. ಒಟ್ಟು 114 ಘನತ್ಯಾಜ್ಯ ಪರಿವೀಕ್ಷಕರನ್ನು 2 ಏಜೆನ್ಸಿಗಳ ಮೂಲಕ (1.ಮೆ॥ ಆರ್.ಎಂ.ಎಸ್. ಟೆಕ್ನಾಲಾಜಿಸ್ ಪ್ರೈ.ಲಿ ರವರಿಗೆ 57 ಘನತ್ಯಾಜ್ಯ ಪರಿವೀಕ್ಷಕರನ್ನು ಹಾಗೂ 2. ಮೆ॥ ವೆಂಕಟಪ್ಪ ಆನಂದ ಸರ್ವಿಸ್ ಪ್ರೈ.ಲಿ ರವರಿಗೆ 57 ಘನತ್ಯಾಜ್ಯ ಪರಿವೀಕ್ಷಕರನ್ನು ಒದಗಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.) ತಲಾ ರೂ.1,33,03,800/- ಒಟ್ಟು ರೂ. 2,66,07,600/- ಗಳಿಗೆ ಒಂದು ವರ್ಷದ ಅವಧಿಗೆ ಘನತ್ಯಾಜ್ಯ ಪರಿವೀಕ್ಷಕರ ಸೇವೆಯನ್ನು ಪಡೆಯಲಾಗಿರುತ್ತದೆ.

ಸದರಿ ಕಾರ್ಯಕ್ಕೆ ಅವಶ್ಯವಿರುವ ರೂ.2,66,07,600/- ಗಳನ್ನು 2017-18ರ ಆಯವ್ಯಯದ ಘನತ್ಯಾಜ್ಯ ನಿರ್ವಹಣೆಯ ಲೆಕ್ಕಶೀರ್ಷಿಕೆ ಪಿ-3228 ಮಾರ್ಷಲ್‌ಗಳಿಗೆ ಗೌರವಧನ ಅನುದಾನದಲ್ಲಿ ಲಭ್ಯವಿರುವ 7.00 ಕೋಟಿಗಳಿಗೆ ಈಗಾಗಲೇ ಮಾರ್ಷಲ್‌ಗಳನ್ನು ಪಡೆದುಕೊಳ್ಳುವ ಕಾರ್ಯ ವಿಳಂಭವಾಗುತ್ತಿರುವ ಹಿನ್ನಲೆಯಲ್ಲಿ ಏಪ್ರಿಲ್-17 ರಿಂದ ಅಗಸ್ಟ್-17 ರವರೆಗೆ 5 ತಿಂಗಳ ಅವಧಿಗೆ ವ್ಯಯಿಸಲಾಗದೇ ಇರುವ ಮೊತ್ತ 2.91 ಕೋಟಿಗಳ ಮೊತ್ತದಲ್ಲಿ ಭರಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ***07]. ವಿಷಯದ ಸಂಖ್ಯೆ: ತೆಆಸ್ಥಾಸ/ 156 /2017-18***

ಪ್ರಧಾನ ಅಭಿಯಂತರರ ದಿನಾಂಕ: 28-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2017-18ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಅರಣ್ಯ ಘಟಕದ 2017-18ನೇ ಸಾಲಿನ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗೆ ವೆಚ್ಚ ಭರಿಸಲು ಸಲುವಾಗಿ ಪಿ-1701 ಲೆಕ್ಕಶೀರ್ಷಿಕೆ ಅಡಿ ಒಟ್ಟು ರೂ.793.42 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು, ಅದರಂತೆ ಬೇಡಿಕೆ ಸಲ್ಲಿಸಲಾಗಿತ್ತು ಆದರೆ, ಸದರಿ ಕಾಮಗಾರಿಗೆ 2017-18ರ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ರೂ.500 ಲಕ್ಷಗಳನ್ನು ಸೀಮಿತಗೊಳಿಸಿ ಅನುಮೋದನೆ ನೀಡಲಾಗಿದೆ.

2016-17ನೇ ಸಾಲಿನಲ್ಲಿ ಅರಣ್ಯ ಘಟಕದ ವತಿಯಿಂದ ಒಟ್ಟು 21 ಮರಗಳ ವ್ಯವಸ್ಥಿತ ನಿರ್ವಹಣೆ ತಂಡವು ಕಾರ್ಯ ನಿರ್ವಹಿಸುತ್ತಿದ್ದು, ವಾರ್ಷಿಕ ಕ್ರೀಯಾ ಯೋಜನೆಯು ಸದರಿ 21 ತಂಡಗಳನ್ನು 2017-18ನೇ ಸಾಲಿನಲ್ಲಿ ಕಾಮಗಾರಿಯನ್ನು ಹಿಂದಿನ ಸಾಲಿನ ಗುತ್ತಿಗೆದಾರರಿಂದಲೇ ಮುಂದುವರೆಸಲು ದಿ: 02.08.2017 ರಂದು ನಡೆ ತೋಟಗಾರಿಕಾ ಸ್ಥಾಯಿ ಸಮಿತಿಯು ಅನುಮೋದನೆ ನೀಡಿರುತ್ತದೆ ಹಾಗೂ ಇದು ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡಿರುತ್ತದೆ.

2017-18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1701 ಲೆಕ್ಕಶೀರ್ಷಿಕೆಯಡಿ (ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿ) ರೂ.500.00 ಲಕ್ಷಗಳ ಅನುದಾನ ಮಾತ್ರ ಲಭ್ಯವಿದ್ದು ಸದರಿ ಅನುದಾನವು ಒಟ್ಟು 21 ತಂಡಗಳಿಗೆ ಒಟ್ಟು 230 ದಿನಗಳಿಗೆ ವೆಚ್ಚ ಭರಿಸಲು ಸಾಧ್ಯವಾಗುತ್ತದೆ ಅಂದರೆ ಈ ಅನುದಾನದಲ್ಲಿ ದಿ: 01.04.2017 ರಿಂದ ದಿ: 16.11.2017ರ ವರೆಗಿನ ಅವಧಿಗೆ ಮಾತ್ರ ಕಾಮಗಾರಿ ನಿರ್ವಹಿಸಲು ಅವಕಾಶವಿರುತ್ತದೆ ಆದ್ದರಿಂದ ದಿ: 15.11.2017 ರಿಂದ ದಿ: 31.03.2018ರ ವರೆಗೆ ಒಟ್ಟು 135 ದಿನಗಳಿಗೆ ಒಟ್ಟು 21 ತಂಡಗಳಿಗೆ ದಿನವೊಂದಕ್ಕೆ ರೂ.10,350/- ರಂತೆ ಒಟ್ಟು ರೂ.293.42 ಲಕ್ಷಗಳ ಅನುದಾನದ ಕೊರತೆ ಉಂಟಾಗುತ್ತದೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶದಂತೆ ಪ್ರಸ್ತುತ 2017-18ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಕ್ರಮ ಸಂಖ್ಯೆ: 7ರ ಪಿ-1846ರ ಅಡಿಯಲ್ಲಿ ಸಸಿಗಳ ಉತ್ಪಾದನೆಗಾಗಿ ಒಟ್ಟು ರೂ.580.00 ಲಕ್ಷಗಳನ್ನು ಮೀಸಲಿರಿಸಿದ್ದು, ಇಷ್ಟೊಂದು ಮೊತ್ತವು ಸಸಿಗಳ ಉತ್ಪಾದನೆಗೆ ಅಗತ್ಯವಿಲ್ಲದೇ ಇರುವುದರಿಂದ ಈ

ಮೊತ್ತದಲ್ಲಿ ಮರಗಳ ವ್ಯವಸ್ಥಿತ ನಿರ್ವಹಣೆಗೆ ಕಡಿಮೆ ಬೀಳುವ ರೂ.293.42 ಲಕ್ಷಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಉದ್ದೇಶಿಸಿದೆ. ಆದ್ದರಿಂದ ರೂ.580.00 ಲಕ್ಷಗಳ ಪೈಕಿ ರೂ.293.42 ಲಕ್ಷಗಳನ್ನು ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಯನ್ನು ದಿ: 31.03.2018 ರವರೆಗೆ ನಿರ್ವಹಿಸಲು ಅಗತ್ಯವಿರುವ ಮೊತ್ತವನ್ನು ಪಿ–1846 ಲೆಕ್ಕಶೀರ್ಷಿಕೆಯಡಿ ಮರು ಹೊಂದಾಣಿಕೆ ಮಾಡಿಕೊಡಲು ಹಾಗೂ ರೂ.293.42 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡಲು ಅನುಮತಿ ಕೋರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***08]. ವಿಷಯದ ಸಂಖ್ಯೆ: ತೆಆಸ್ಥಾಸ/ 159 /2017–18***

ಪ್ರಧಾನ ಅಭಿಯಂತರರ ದಿನಾಂಕ: 28–10–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2017–18ನೇ ಸಾಲಿನ ಆಯವ್ಯಯದಲ್ಲಿ ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಲೆಕ್ಕಶೀರ್ಷಿಕೆ ಪಿ–0485ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ 5000.00 ಲಕ್ಷಗಳ ಅನುದಾನವನ್ನು ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚುವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡಲು ಲೆಕ್ಕಶೀರ್ಷಿಕೆ ಪಿ–3245ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ರೂ.600.00 ಲಕ್ಷಗಳು ಅನುವು ಮಾಡಲಾಗಿರುತ್ತದೆ. ಈ ವಿಚಾರದಲ್ಲಿ ಮುಖ್ಯ ಅಭಿಯಂತರರು (ಯೋಜನೆ–ಕೇಂದ್ರ) ರವರು ರುದ್ರಭೂಮಿಗಳ ಟೋಟಲ್ ಸ್ಟೇಷನ್ ಸರ್ವೆ, ಜಾಗ ಗುರುತು, ಒಳಭಾಗದಲ್ಲಿರುವ ಕಟ್ಟಡಗಳು ಹಾಗೂ ದಾರಿ ಮತ್ತು ಇತರೆ ವಿವರಗಳೊಂದಿಗೆ ನಕ್ಷೆ ತಯಾರಿಸಿರುವುದು ಸಮಗ್ರ ಅಭಿವೃದ್ಧಿಗೆ ನಕ್ಷೆಗಳು, ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಲು 08 ವಲಯಗಳಲ್ಲಿ ಈ ಕೆಳಕಂಡಂತೆ ಪ್ಯಾಕೇಜ್‌ಗಳಾಗಿ ವಿಂಗಡಿಸಲು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಲಯ | ರುದ್ರಭೂಮಿಗಳು/ವಿಸ್ತೀರ್ಣ | ಪ್ಯಾಕೇಜ್‌ಗಳ ಸಂಖ್ಯೆ |
|---|---|---|---|
| 1. | ಪೂರ್ವ | 23 ರುದ್ರಭೂಮಿಗಳು (ಎ–10 ಬಿ–13) | 01 |
| 2. | ಪಶ್ಚಿಮ | 15 ರುದ್ರಭೂಮಿಗಳು (ಎ–01 ಬಿ–09–ಸಿ–5) | 01 |
| 3. | ದಕ್ಷಿಣ | 18 ರುದ್ರಭೂಮಿಗಳು (ಎ–07 ಬಿ–11) | 01 |
| 4. | ಯಲಹಂಕ | 12 ರುದ್ರಭೂಮಿಗಳು (ಎ–01 ಬಿ–08–ಸಿ–03) | 01 |
| 5. | ರಾಜರಾಜೇಶ್ವರಿನಗರ | 11 ರುದ್ರಭೂಮಿಗಳು (ಎ–01 ಬಿ–05–ಸಿ–06) | 01 |
| 6. | ಬೊಮ್ಮನಹಳ್ಳಿ | 71 ರುದ್ರಭೂಮಿಗಳು (ಎ–0 ಬಿ–27–ಸಿ–44) | 02 |
| 7. | ದಾಸರಹಳ್ಳಿ | 10 ರುದ್ರಭೂಮಿಗಳು (ಎ–0 ಬಿ–01–ಸಿ–09) | 01 |
| 8. | ಮಹದೇವಪುರ | 38 ರುದ್ರಭೂಮಿಗಳು (ಎ–01 ಬಿ–13–ಸಿ–24) | 01 |

ಈ ಮೇಲಿನ 09 ಪ್ಯಾಕೇಜ್‌ಗಳಿಗೆ 09 ಸಮಾಲೋಚಕರನ್ನು ಪ್ರತ್ಯೇಕವಾಗಿ ನೇಮಿಸಲು ಅವಶ್ಯಕತೆ ಇರುತ್ತದೆ. ಈ ಕಾರ್ಯಕ್ಕೆ (ಅ) ಪ್ರತಿ ರುದ್ರಭೂಮಿಯನ್ನು ಟೋಟಲ್ ಸ್ಟೇಷನ್ ಸರ್ವೆ ಮುಖಾಂತರ ಸರಹದ್ದು ಗುರುತಿಸುವುದು ಹಾಗೂ ರುದ್ರಭೂಮಿಯಲ್ಲಿ ಹಾಲಿ ಇರುವ ಕಟ್ಟಡಗಳು ಕಾಲು ದಾರಿ ಮತ್ತು ಇತ್ಯಾಧಿಗಳನ್ನು ಸಿದ್ದಪಡಿಸುವುದು ಮತ್ತು (ಆ) ರುದ್ರಭೂಮಿಗಳಲ್ಲಿ ಇರುವ ಹಾಲಿ ಕಟ್ಟಡಗಳ ನವೀಕರಣ, ಹೊಸದಾಗಿ ಕಛೇರಿ ಮತ್ತು ಕಾವಲುಗಾರರ ಕಟ್ಟಡ, ವಿಧಿವಿಧಾನಗಳನ್ನು ನಿರ್ವಹಿಸುವ ಕಟ್ಟಡ, ಬೋರ್‌ವೆಲ್, ಟ್ಯಾಂಕ್ ನಿರ್ಮಾಣ ಮತ್ತು ನೀರು ಸರಬರಾಜು ಮತ್ತು ಕಾಂಪೌಂಡ್ ಗೋಡೆ, ಗೇಟ್ ಅಳವಡಿಸುವುದು, ಶೌಚಾಲಯ, ಕಾಲುದಾರಿ ನಿರ್ಮಾಣ, ತ್ಯಾಜ್ಯ ನಿರ್ವಹಣೆ, ಕುಳಿತುಕೊಳ್ಳುವ ಆಸನಗಳ ವ್ಯವಸ್ಥೆ, ಬರುವ ಸಾರ್ವಜನಿಕರು ತಂಗುದಾಣ, ವಿದ್ಯುತ್ ಚಿತಾಗಾರ, ದಾರಿದೀಪ ಮತ್ತು ಇನ್ನಿತರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು

ಒಳಗೊಂಡಂತೆ ನಕ್ಷೆಗಳು, ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಲು ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಡಿಪಿಆರ್ ಸಿದ್ದಪಡಿಸಲು ಸಮಾಲೋಚಕರನ್ನು ನೇಮಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಿರುತ್ತಾರೆ.

ಪಾಲಿಕೆಯ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಪತ್ರ ಸಂ.135/02, ದಿ: 25.04.2017ರಲ್ಲಿ ರುದ್ರಭೂಮಿಗಳು ಮತ್ತು ಚಿತಾಗಾರಗಳಲ್ಲಿ ಸಮಗ್ರ ಅಭಿವೃದ್ಧಿ, ಚಾಮರಾಜಪೇಟೆ ಬನಶಂಕರಿ ಮತ್ತು ಕಲ್ಲಹಳ್ಳಿ ರುದ್ರಭೂಮಿಯಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ ರುದ್ರಭೂಮಿಗಳ ಸಮಗ್ರ ಸುಧಾರಣೆ ರುದ್ರಭೂಮಿ, ಚಿತಗಾರಗಳಿಗೆ ಮತ್ತು ಇನ್ನಿತರೇ ಕಾರ್ಯಗಳನ್ನು ಪೂರ್ಣಗೊಳಿಸುವುದು ಸೂಕ್ತವಾಗಿರುತ್ತದೆ. ಎಂದು ಸೂಚಿಸಿರುತ್ತಾರೆ.

ಈ ಆದೇಶದಂತೆ ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು 2017-18ನೇ ಸಾಲಿನ ಆಯವ್ಯಯದಲ್ಲಿ ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಲೆಕ್ಕಶೀರ್ಷಿಕೆ ಪಿ-1485ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ 5000.00 ಲಕ್ಷಗಳ ಅನುದಾನವನ್ನು ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚುವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡಲು ಲೆಕ್ಕಶೀರ್ಷಿಕೆ ಪಿ-3245 ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ರೂ.600.00 ಲಕ್ಷಗಳು ಅನುವು ಮಾಡಿದ್ದು ಜಾಬ್‌ಕೋಡ್‌ಗಳನ್ನು ನೀಡಲು ಕೋರಿರುತ್ತಾರೆ. ಮುಂದುವರೆದಂತೆ ಮುಖ್ಯ ಆರ್ಥಿಕ ಅಧಿಕಾರಿರವರು ಲೆಕ್ಕಶೀರ್ಷಿಕೆ ಪಿ-0485ರಡಿಯಲ್ಲಿ ರೂ.450.00 ಲಕ್ಷಗಳಿಗೆ ವಾರ್ಡ್-79 ಮತ್ತು 61ರ ಪ್ರಸ್ತಾವನೆ ಸಲ್ಲಿಸಲಾಗಿದ್ದು ಮತ್ತು ಲೆಕ್ಕಶೀರ್ಷಿಕೆ ಪಿ-3248 ಅಡಿಯಲ್ಲಿ ರೂ.200.00 ಲಕ್ಷಗಳಿಗೆ ವಾರ್ಡ್-79 ಮತ್ತು 61ರ ಪ್ರಸ್ತಾವನೆ ಸಲ್ಲಿಸಲಾಗಿದ್ದು ಎಂದು ವರದಿ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶದಂತೆ, ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ ಪಿ0485 ಮತ್ತು ಪಿ3245 ಗಳಲ್ಲಿ ಯಾವ ಮೊತ್ತಕ್ಕೆ ಪ್ರತ್ಯೇಕವಾಗಿ ಜಾಬ್‌ಕೋಡ್‌ಗಳನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

***09]. ವಿಷಯದ ಸಂಖ್ಯೆ: ತೆಆಸ್ಥಾಸ/ 161 /2017-18***

ಆಯುಕ್ತರ ದಿನಾಂಕ: 03-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನದ ಟ್ರಸ್ಟ್(ರಿ), ನಂ.468/ಸುರ್ವೆ, 13ನೇ ಮುಖ್ಯರಸ್ತೆ, 3ನೇ ಹಂತ, ಮಂಜುನಾಥನಗರ, ಬೆಂಗಳೂರು-560010, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಟ್ರಸ್ಟ್ (ರಿ), ಸಂಸ್ಥೆಯ ವಿಶ್ವೇಶ್ವರಯ್ಯ ಪ್ರತಿಷ್ಠಾನದ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01- ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ

ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016–17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017–18ರ ಸಾಲಿನ ಅನುಮೋದಿತ ಆಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. ಅಲ್ಲದೆ Basketball federation of India ಸಂಸ್ಥೆಗೆ ಮೊತ್ತ ರೂ.50.00 (ಐವತ್ತು) ಲಕ್ಷಗಳನ್ನು ಈಗಾಲೇ ಬಿಡುಗಡೆಗೊಳಿಸಿರುವುದಲ್ಲದೆ 05 ಕಡತಗಳು ಚಾಲ್ತಿಯಲ್ಲಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ' ಟಿಪ್ಪಣಿ.

**ನಿರ್ಣಯ: 2017–18ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.**

***10]. ವಿಷಯದ ಸಂಖ್ಯೆ: ತೆಆಸ್ಥಾಸ/ 163 /2017–18***

ಆಯುಕ್ತರ ದಿನಾಂಕ: 07–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶಾಶ್ವತಿ ಸೇವಾ ಸಮಿತಿ ಟ್ರಸ್ಟ್ (ರಿ), ನಂ.19, 1ನೇ ಮುಖ್ಯರಸ್ತೆ, ಕಮಲಾನಗರ ಬೆಂಗಳೂರು–560079, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.30.00 (ಮೂವತ್ತು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ಶಾಶ್ವತಿ ಸೇವಾ ಸಮಿತಿ ಟ್ರಸ್ಟ್ (ರಿ), ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01–ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016–17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017–18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. 2017–18ರ ಲೆಕ್ಕಶೀರ್ಷಿಕೆ ಆಯವ್ಯಯದಲ್ಲಿ ಸದರಿ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಶಾಶ್ವತಿ ಸೇವಾ ಸಮಿತಿ ಟ್ರಸ್ಟ್ (ರಿ) ರವರ ಕಾರ್ಯಚಟುವಟಿಕೆಗಳಿಗಾಗಿ ರೂ.5.00 (ರೂ.ಐದು ಲಕ್ಷ ಮಾತ್ರ) ಲಕ್ಷಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.**

***11]. ವಿಷಯದ ಸಂಖ್ಯೆ: ತೆಆಸ್ಥಾಸ/ 164 /2017–18***

ಆಯುಕ್ತರ ದಿನಾಂಕ: 07–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಸುಂಧರೆ ಸೇವಾ ಟ್ರಸ್ಟ್(ರಿ), ನಂ.270, 5ನೇ ಕ್ರಾಸ್, 1ನೇ ಮುಖ್ಯರಸ್ತೆ, ಕಮಲಾನಗರ ಬೆಂಗಳೂರು, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.05.00 (ಐದು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ವಸುಂಧರೆ ಸೇವಾ ಟ್ರಸ್ಟ್ (ರಿ), ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01– ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ

ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016-17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017-18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. 2017-18ರ ಲೆಕ್ಕ ಶೀರ್ಷಿಕೆ ಆಯವ್ಯಯದಲ್ಲಿ ಸದರಿ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ' ಟಿಪ್ಪಣಿ.

**ನಿರ್ಣಯ: 2017-18ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.**

***12]. ವಿಷಯದ ಸಂಖ್ಯೆ: ತೆಆಸ್ಥಾಸ/ 165 /2017-18***

ಆಯುಕ್ತರ ದಿನಾಂಕ: 03-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಡಿ ಹೆಚ್ ರಾಜಣ್ಣ ನೀಲಾಂಬಿಕೆ ಸಾಂಸ್ಕೃತಿಕ ಟ್ರಸ್ಟ್(ರಿ), ನಂ92, 3ನೇ ಮುಖ್ಯರಸ್ತೆ, 4ನೇ ಫೇಸ್, 7ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು-560085, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.2.50 (ಎರಡು ಲಕ್ಷ ಐವತ್ತು ಸಾವಿರ)ಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ಡಿ ಹೆಚ್ ರಾಜಣ್ಣ ನೀಲಾಂಬಿಕೆ ಸಾಂಸ್ಕೃತಿಕ ಟ್ರಸ್ಟ್(ರಿ) ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01- ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016-17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017-18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. ಅಲ್ಲದೆ Basketball federation of India ಸಂಸ್ಥೆಗೆ ಮೊತ್ತ ರೂ.50.00 (ಐವತ್ತು) ಲಕ್ಷಗಳನ್ನು ಈಗಾಲೇ ಬಿಡುಗಡೆಗೊಳಿಸಿರುವುದಲ್ಲದೆ 05 ಕಡತಗಳು ಪ್ರಸ್ತವನೆಯಲ್ಲಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ವಿಷಯದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017-18ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.**

***13]. ವಿಷಯದ ಸಂಖ್ಯೆ: ತೆಆಸ್ಥಾಸ/ 166 /2017-18***

ಆಯುಕ್ತರ ದಿನಾಂಕ: 03-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್(ರಿ), ಆದಿಚುಂಚನಗಿರಿ ಆಂಗ್ಲ ಶಾಲೆ ಬಿಲ್ಡಿಂಗ್, 1ನೇ ಮಹಡಿ (ಹಾಸ್ಟೆಲ್ ಹತ್ತಿರ), ವಿಜಯನಗರ, ಬೆಂಗಳೂರು-560040, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.04.00 (ನಾಲ್ಕು)ಲಕ್ಷಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್(ರಿ) ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01– ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016–17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017–18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಸೂಚಿಸಿರುತ್ತಾರೆ. ಅಲ್ಲದೆ Basketball federation of India ಸಂಸ್ಥೆಗೆ ಮೊತ್ತ ರೂ.50.00 (ಐವತ್ತು) ಲಕ್ಷಗಳನ್ನು ಈಗಾಲೇ ಬಿಡುಗಡೆಗೊಳಿಸಿರುವುದಲ್ಲದೆ 05 ಕಡತಗಳು ಪ್ರಸ್ತವನೆಯಲ್ಲಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ವಿಷಯದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2017–18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 01–ಕೌನ್ಸಿಲ್ ಪಿ–048 ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಹಲಿ ಬಾಕಿ ಉಳಿಕೆಯಿರುವ ಅನುದಾನದಲ್ಲಿ ರೂ.2.00 (ಎರಡು ಲಕ್ಷ) ಲಕ್ಷಗಳ ಅನುದಾನವನ್ನು ಭರಿಸಿಕೊಂಡು ಪಾವತಿಸುವುದೆಂದು ಹಾಗೂ ಈಗಾಗಲೇ ಹಂಚಿಕೆ ಮಾಡಲಾಗಿರುವ ಸಂಘ/ಸಂಸ್ಥೆಗಳಿಗೆ ಮುಂದಿನ ದಿನಗಳಲ್ಲಿ ಹಣದ ಕೊರತೆ ಕಂಡು ಬಂದಲ್ಲಿ 2017–18ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ವೆಚ್ಚಗಳನ್ನು ಭರಿಸಿಕೊಂಡು ಪಾವತಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/ 169 /2017–18***

ಆಯುಕ್ತರ ದಿನಾಂಕ: 18–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಎ ಎಂ ಫೌಂಡೇಷನ್ (ರಿ), ನಂ.1643, ಈಸ್ಟ್ಎಂಡ್ ಎ ಮೈನ್ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು–560069, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048ರ ಅಡಿಯಲ್ಲಿ ಸಹಾಯಧನ ಮಾಂಜೂರು ಮಾಡುವ ಬಗ್ಗೆ.

ಎ ಎಂ ಫೌಂಡೇಷನ್ (ರಿ), ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01– ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016–17ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017–18ರ ಸಾಲಿನ ಅನುಮೋದಿತ ಆಯವ್ಯಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಸೂಚಿಸಿರುತ್ತಾರೆ. 2017–18ರ ಲೆಕ್ಕ ಶೀರ್ಷಿಕೆ ಆಯವ್ಯಯದಲ್ಲಿ ಸದರಿ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017–18ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.**

***15]. ವಿಷಯದ ಸಂಖ್ಯೆ: ತೆಆಸ್ಥಾಸ/ 171 /2017-18***

ಆಯುಕ್ತರ ದಿನಾಂಕ: 15-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕೌಸ್ತುಭ ಪ್ರತಿಷ್ಠಾನ ಟ್ರಸ್ಟ್ (ರಿ), ನಂ. 12, 14ನೇ ಮುಖ್ಯರಸ್ತೆ, 3ನೇ ಬ್ಲಾಕ್ ಜಯನಗರ ಈಸ್ಟ್, ಬೆಂಗಳೂರು-560011, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 67ರಲ್ಲಿ ಮೊತ್ತ ರೂ.02.00 (ಎರಡು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಕೌಸ್ತುಭ ಪ್ರತಿಷ್ಠಾನ ಟ್ರಸ್ಟ್ (ರಿ), ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಅನುಮೋದಿತ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ.02.00 (ಎರ'ಡು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಕೌಸ್ತುಭ ಪ್ರತಿಷ್ಠಾನ ಟ್ರಸ್ಟ್ (ರಿ) ರವರ ಕಾರ್ಯಚಟುವಟಿಕೆಗಳಿಗಾಗಿ 2017-18ನೇ ಸಾಲಿಗೆ ಹಂಚಿಕೆ ಮಾಡಲಾಗಿರುವ ಸಹಾಯಧನವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.**

***16]. ವಿಷಯದ ಸಂಖ್ಯೆ: ತೆಆಸ್ಥಾಸ/ 172 /2017-18***

ಆಯುಕ್ತರ ದಿನಾಂಕ: 15-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀರಾಜರಾಜೇಶ್ವರಿ ಕ್ರೀಡಾ ಮತ್ತು ಸಾಂಸ್ಕೃತಿಕ ಹಿತರಕ್ಷಣ ಸಮಿತಿ (ರಿ), ನಂ.111, ಎನ್ ಜಿ ಒ ಎಸ್ ಕಾಲೋನಿ, ಶಂಕರ್‌ನಾಗ್ ಬಸ್ ನಿಲ್ದಾಣದ ಹತ್ತಿರ, ಕಮಲಾನಗರ ಬೆಂಗಳೂರು-560079, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.5.10 (ಐದು ಲಕ್ಷ ಹತ್ತು ಸಾವಿರ) ಗಳನ್ನು ಸದರಿ ಸಂಸ್ಥೆಗೆ ಮಾಂಜೂರು ಮಾಡುವ ಬಗ್ಗೆ.

ಶ್ರೀರಾಜರಾಜೇಶ್ವರಿ ಕ್ರೀಡಾ ಮತ್ತು ಸಾಂಸ್ಕೃತಿಕ ಹಿತರಕ್ಷಣ ಸಮಿತಿ (ರಿ), ಸಂಸ್ಥೆಯ ಕಾರ್ಯಚಟುವಟಿಕೆ ಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01- ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಅರವತ್ತೈದು) ಲಕ್ಷಗಳಲ್ಲಿ 2016-17 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017-18ರ ಸಾಲಿನ ಅನುಮೋದಿತ ಆಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. 2017-18ರ ಆಯವ್ಯಯದ ಲೆಕ್ಕ ಶೀರ್ಷಿಕೆಯಡಿ ಸದರಿ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2017-18ನೇ ಸಾಲಿಗೆ ಹಂಚಿಕೆ ಮಾಡಲಾಗಿರುವ ಸಹಾಯಧನದಲ್ಲಿ ರೂ.1.00 (ರೂ.ಒಂದು ಲಕ್ಷ ಮಾತ್ರ) ಲಕ್ಷವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.**

## *17]. ವಿಷಯದ ಸಂಖ್ಯೆ: ತೆಆಸ್ಥಾಸ/ 174 /2017–18*

ಪ್ರಧಾನ ಅಭಿಯಂತರರರ ದಿನಾಂಕ: 30–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (ಮಹದೇವಪುರ) ರವರು ವಾರ್ಡ್ ನಂ.150ರಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಗಣೇಶ ವಿಸರ್ಜನೆ ಕಾರ್ಯಕ್ರಮಕ್ಕಾಗಿ ಸಂಬಂಧಪಟ್ಟಂತೆ ಗುರುತಿಸಿರುವ ಸ್ಥಳದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಇದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Ward No | Name of work | Est cost |
|---|---|---|---|
| 1 | 150 | Providing Barricading to Ganesha immersion places near lakes & mobile tankers for immersing Ganesha Idols | Rs.82,000.00 |

ಮಹದೇವಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ 150 ರಲ್ಲಿ ಗುರುತಿಸಿಸಲಾಗಿದ್ದು, ಗಣೇಶ ಮೂರ್ತಿಯ ವಿಸರ್ಜನೆಯನ್ನು ದೇವರಬೀಸನಹಳ್ಳಿ ಕೆರೆ ಹಾಗೂ ಕೈಗೊಂಡನಹಳ್ಳಿ ಗುರುತಿಸಲಾಗಿದ್ದು ದೇವರಬೀಸನಹಳ್ಳಿ ಕೆರೆಯ ಪಕ್ಕದಲ್ಲಿ ಬ್ಯಾರಿಕೇಡ್ ಅನ್ನು ಅಳವಡಿಸಬೇಕಾಗಿರುತ್ತದೆ. ಚಿಕ್ಕದಾಗಿರುವ ಗಣೇಶಮೂರ್ತಿ ವಿಸರ್ಜನೆ ಮಾಡಲು ಮೊಬೈಲ್ ಟ್ಯಾಂಕರ್ ವ್ಯವಸ್ಥೆಯನ್ನು ಬೆಳ್ಳಂದೂರು ಪಾಲಿಕೆಯ ಕಛೇರಿ ಮುಂಭಾಗದಲ್ಲಿ ದೊಡ್ಡಕನ್ನಳ್ಳಿ ಸಂಪರ್ಕ ಕೇಂದ್ರದ ಮುಂಭಾಗದಲ್ಲಿ ಕೈಗೊಂಡ್ರಹಳ್ಳಿ ಕೆರೆಯ ಹತ್ತಿರವಿರುವ ಕಲ್ಯಾಣಿಯಲ್ಲಿ, ಈ ಎಲ್ಲಾ ಶೇಖರಣೆಯಾಗಿರುವ ವಸ್ತುಗಳನ್ನು ಸಾಗಿಸಲು ಟ್ರ್ಯಾಕ್ಟರ್ ಬಳಸಬೇಕಾಗಿದ್ದು ಅಂದಾಜು ಪಟ್ಟಿಯನ್ನು ರೂ.82,000.00 ಗಳಿಗೆ ತಯಾರಿಸಲಾಗಿರುತ್ತದೆ. ಈ ಕಾರ್ಯವನ್ನು ಕೊಟೇಷನ್ ಮುಖಾಂತರ ಗುತ್ತಿಗೆದಾರರನ್ನು ನಿಗಧಿಪಡಿಸಿ ಡಿ.ಸಿ.ಬಿಲ್ಲಿನ ಮೂಲಕ ಪಾವತಿಸಲು ಅನುಮೋದನೆ ಕೋರಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (09) ರಲ್ಲಿ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡುವ ಕಾಮಗಾರಿಯನ್ನು 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–3155 (ಇಮ್ಮರ್ಷನ್ ಆಫ್ ಗಣೇಶ ಐಡಲ್ಸ್) ಪುಟ 89ರಲ್ಲಿ ರೂ.100.00 ಲಕ್ಷಗಳನ್ನು ಅನುವು ಮಾಡಲಾಗಿದ್ದು ಈಗ ಅನುದಾನವು ಲಭ್ಯವಿಲ್ಲವೆಂದು ಮತ್ತು ಕೊರತೆ ಅನುದಾನವಾದ ರೂ.82,000.00 ಮೊತ್ತವನ್ನು ಅಳವಡಿಸಲು ಸಮಿತಿಯ ಅನುಮೋದನೆಯೊಂದಿಗೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್–150 ರಲ್ಲಿ ಗಣೇಶ ವಿಸರ್ಜನಾ ಕಾರ್ಯಕ್ರಮಕ್ಕೆ ಕಾಮಗಾರಿಯಾದ Providing Barricading to Ganesha immersion places near lakes & mobile tankers for immersing Ganesha Idols ಗೆ ಕೊರತೆ ಅನುದಾನ ಮೊತ್ತವಾದ ರೂ.82,000.00 ಗಳನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ಕಾಮಗಾರಿಗೆ ವೆಚ್ಚವಾಗಿರುವ ಅನುದಾನವನ್ನು 2017–18ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಪಾವತಿಗೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *18]. ವಿಷಯದ ಸಂಖ್ಯೆ: ತೆಆಸ್ಥಾಸ/ 175 /2017–18*

ಆಯುಕ್ತರ ದಿನಾಂಕ: 15–09–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಸರ್ಕಾರ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನ ಹಕ್ಕು ಪತ್ರವನ್ನು ಮಾನ್ಯ ತಹಸೀಲ್ದಾರ್ ರವರು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಸಾಣೇಗುರವನಹಳ್ಳಿ ಗ್ರಾಮದ ಸರ್ವೆ ನಂ. 46 ಸ್ವತ್ತಿನ 622,

ಪೂರ್ವ-ಪಶ್ಚಿಮ 20 ಅಡಿಗಳು, ಉತ್ತರ ದಕ್ಷಿಣ 36 ಅಡಿಗಳು ಒಟ್ಟು 720 ಚದುರ ಅಡಿ ಸ್ವತ್ತನ್ನು ಶ್ರೀ ಷಣ್ಮುಗಂ ಬಿನ್ ಕುಪ್ಪುಸ್ವಾಮಿ ರವರಿಗೆ ದಿನಾಂಕ: 21-05-1992 ರಂದು ಹಂಚಿಕೆ ಮಾಡಲಾಗಿದೆ. ಹಂಚಿಕೆ ಮಾಡಿದ ದಿನಾಂಕದಿಂದ 20 ವರ್ಷಗಳ ಅವಧಿಯವರೆಗೂ ಬೇರೆಯವರಿಗೆ ಪರಭಾರೆ ಮಾಡತಕ್ಕದ್ದಲ್ಲ ಎಂಬ ಷರತ್ತಿಗೆ ಒಳಪಡಿಸಿ ಹಂಚಿಕೆ ಮಾಡಲಾಗಿದೆ.

ಶ್ರೀ ಷಣ್ಮುಗಂ ರವರು ತಮ್ಮ ಹಕ್ಕನ್ನು ದಿನಾಂಕ: 03-07-1992 ರಂದು ಶ್ರೀ ನಾಗರತ್ನರವರಿಗೆ ಕ್ರಯದ ಸ್ವಾಧೀನ ಪತ್ರ ಮತ್ತು ಜಿ.ಪಿ.ಎ (ನೊಂದಣಿಯಾಗದಿರುವ) ಮಾಡಿದ್ದು, ಈ ಪ್ರದೇಶವು ದಿನಾಂಕ: 01-10-1995 ರಿಂದ ಪಾಲಿಕೆ ವ್ಯಾಪ್ತಿಗೆ ಸೇರಿರುತ್ತದೆ ಮತ್ತು ದಿನಾಂಕ: 25-03-1998 ರಿಂದ ಕೊಳಚೆ ಪ್ರದೇಶದಲ್ಲಿ ಹಕ್ಕು ಪತ್ರ ನೀಡಿರುವ ಪ್ರದೇಶಗಳಿಗೆ ರೂ. 500/- ರಂತೆ ಅಭಿವೃದ್ಧಿ ಶುಲ್ಕ ಪಡೆದು ಅನುಭವದಾರ ಅಥವಾ ಗುತ್ತಿಗೆದಾರ (ನಾಗರತ್ನ.ಜಿ) ರವರ ಹೆಸರಿಗೆ ಖಾತಾ ನೊಂದಾವಣಿ ಮಾಡಲಾಗಿರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್‌ರವರ ಆದೇಶದಂತೆ ಶ್ರೀ ಷಣ್ಮುಗಂ ಬಿನ್ ಕುಪ್ಪೇಸ್ವಾಮಿ ರವರು ಹಂಚಿಕೆ ಮಾಡಲಾಗಿದ್ದ ಸ್ವತ್ತನ್ನು 20 ವರ್ಷಗಳ ಕಾಲ ಪರಭಾರೆ ಮಾಡಬಾರದೆಂಬ ಷರತ್ತನ್ನು ಉಲ್ಲಂಘಿಸಿರುವುದು ದೃಢಪಟ್ಟಿರುವುದರಿಂದ ಸ್ವತ್ತನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ನೀಡಿ ಷಣ್ಮುಗಂ ಬಿನ್ ಕುಪ್ಪೇಸ್ವಾಮಿ ರವರಿಗೆ ನೀಡಲಾಗಿರುವ ಹಕ್ಕು ಪತ್ರವನ್ನು ರದ್ದು ಮಾಡಲಾಗಿದ್ದು ಸದರಿ ಸ್ವತ್ತನ್ನು ಬೆಂಗಳೂರು ಮಹಾನಗರ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ತಿಳಿಸಲಾಗಿದೆ.

ಸಹಾಯಕ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರ) ರವರು ಶ್ರೀಮತಿ ನಾಗರತ್ನ ರವರ ಹೆಸರಿನಲ್ಲಿದ್ದ ಅನುಭವದಾರ ಅಥವಾ ಗುತ್ತಿಗೆದಾರ ಹೆಸರಿಗೆ ಮಾಡಲಾದ ಖಾತೆಯನ್ನು ರದ್ದುಪಡಿಸಿ ಬಿಬಿಎಂಪಿ ಆಸ್ತಿಯೆಂದು ದಾಖಲೆ ಪುಸ್ತಕದಲ್ಲಿ ದಾಖಲು ಮಾಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸಾಣೇಗುರುವನಹಳ್ಳಿ ಗ್ರಾಮದ ಸರ್ವೆ ನಂ. 46 ಸ್ವತ್ತಿನ ಸಂಖ್ಯೆ: 622, ಪೂರ್ವ-ಪಶ್ಚಿಮ 20 ಅಡಿಗಳು, ಉತ್ತರ ದಕ್ಷಿಣ 36 ಅಡಿಗಳು ಒಟ್ಟು 720 ಚದುರ ಅಡಿ ಸ್ವತ್ತನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ಪಡೆಯಲು ಮಂಡಿಸಿರುವ **ಆಯುಕ್ತರ ದಿನಾಂಕ: 15.09.2017ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25-11-2017ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25.11.2017ರ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### *19]. ವಿಷಯದ ಸಂಖ್ಯೆ: ತೆಆಸ್ಥಾಸ/ 176 /2017-18*

ಆಯುಕ್ತರ ದಿನಾಂಕ: 31-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗದ ವಾರ್ಡ್ ನಂ: 61ರ ಮಿಲಿಯಮ್ಸ್‌ಟೌನ್ ವ್ಯಾಪ್ತಿಯಲ್ಲಿ ನಗರ ಪಾಲಿಕೆ ವತಿಯಿಂದ ನಿವೃತ್ತ ಪೌರಕಾರ್ಮಿಕರಾದ ಶ್ರೀಮತಿ.ತಿರುಪಾಲಮ್ಮ ರವರಿಗೆ ಸ್ವತ್ತಿನ ಸಂಖ್ಯೆ: 48/3 ನ್ನು ಪೂರ್ವ-ಪಶ್ಚಿಮ: 11 ಅಡಿಗಳು ಹಾಗೂ ಉತ್ತರ-ದಕ್ಷಿಣ: 36.5 ಅಡಿಗಳು ಮತ್ತು ನಿವೃತ್ತ ಪೌರ ಕಾರ್ಮಿಕರ ಮಗನಾದ ಶ್ರೀ ಎಂ.ಸಿ.ರಾಜು ರವರಿಗೆ ಸ್ವತ್ತಿನ ಸಂಖ್ಯೆ: 48/4 ನ್ನು ಪೂರ್ವ-ಪಶ್ಚಿಮ: 11 ಅಡಿಗಳು ಹಾಗೂ ಉತ್ತರ-ದಕ್ಷಿಣ: 36.5 ಅಡಿಗಳನ್ನು ಸ್ವಾಧೀನ ಪತ್ರದ ಮುಖಾಂತರ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅಳತೆಗೆ ಅನುಗುಣವಾಗಿ ಕರ್ನಾಟಕ

ಸರ್ಕಾರದ ಆದೇಶ ಸಂಖ್ಯೆ:ನಅಇ 36 ಎಂಎನ್‌ಜೆ 2009, ದಿ:20–09–2009ರ ಆದೇಶವನ್ನು ನಮೂದಿಸಿ, ಚದರ ಮೀಟರ್ ಒಂದಕ್ಕೆ ರೂ.200/–ಗಳಂತೆ ಕ್ರಯದ ಮೊತ್ತವನ್ನು ನಿಗಧಿಪಡಿಸಿ ದಿನಾಂಕ: 30–11–2014 ರಂದು ಸ್ವಾಧೀನಪತ್ರ ನೀಡಿ ಕ್ರಯದ ಮೊತ್ತವನ್ನು ಪಾವತಿಸಿಕೊಳ್ಳಲಾಗಿರುತ್ತದೆ.

ಸದರಿಯವರುಗಳಿಗೆ ಹಂಚಿಕೆ ಮಾಡಲಾಗಿರುವ ಜಾಗಗಳು ತುಂಬಾ ಚಿಕ್ಕದಾದ ಜಾಗವಾಗಿದ್ದು, ಪೂರ್ವ–ಪಶ್ಚಿಮ: 11 ಅಡಿಗಳಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಾಸ ಮಾಡಲು ತುಂಬಾ ಕಷ್ಟಕರವಾಗುವುದರಿಂದ, ಈ ಸ್ವತ್ತಿಗೆ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ ಹೊಂದಿಕೊಂಡಂತೆ ಇರುವ ಸುಮಾರು 9 ಅಡಿಗಳನ್ನು ಸೇರಿಸಿ ಒಟ್ಟಾರೆ ಪೂರ್ವ–ಪಶ್ಚಿಮ: 20 ಅಡಿಗಳು ಹಾಗೂ ಉತ್ತರ–ದಕ್ಷಿಣ: 36.5 ಅಡಿಗಳಿಗೆ ಮಾರ್ಪಡಿಸಿ ಸ್ವಾಧೀನಪತ್ರ ನೀಡಲು ಕೋರಿರುತ್ತಾರೆ.

ಇವರ ಕೋರಿಕೆಯ ಮೇರೆಗೆ ಹಂಚಿಕೆ ಮಾಡಿರುವ ಸ್ಥಳದಲ್ಲಿ ಹೆಚ್ಚುವರಿ ಜಾಗ ಇರುವ ಬಗ್ಗೆ ಆಸ್ತಿ ವಿಭಾಗದ ಭೂಮಾಪಕರು ನೀಡಿರುವ ಸರ್ವೆ ವರದಿ ಹಾಗೂ ಕಾಮಗಾರಿ ವಿಭಾಗದಿಂದ ಪಡೆಯಲಾಗಿರುವ ವರದಿಯಂತೆ ಪೂರ್ವ–ಪಶ್ಚಿಮ: 20 ಅಡಿಗಳು ಹಾಗೂ ಉತ್ತರ–ದಕ್ಷಿಣ: 36.5 ಅಡಿಗಳ ಅಳತೆಯು ಲಭ್ಯವಿರುವ ಬಗ್ಗೆ ಪ್ರತ್ಯೇಕ ನಕ್ಷೆಗಳನ್ನು ಕಡತದಲ್ಲಿ ಲಗತ್ತಿಸಲಾಗಿರುತ್ತದೆ. ಇವರುಗಳ ವರದಿಯ ಅನುಸಾರ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ ಹೊಂದಿಕೊಂಡಂತೆ ಇರುವ ಸುಮಾರು 9 ಅಡಿಗಳ ಅಂಚಿನ ಜಾಗವನ್ನು ಸೇರಿಸಿ, ಎರಡೂ ಫಲಾನುಭವಿಗಳಿಗೆ ಸಮಾನವಾಗಿ 20x36.5 ಅಡಿಗಳ ಅಳತೆಯ ಜಾಗವನ್ನು ಈ ಕೆಳಕಂಡಂತೆ ಹಂಚಿಕೆ ಮಾಡುವ ಬಗ್ಗೆ ಹಾಗೂ ಹಂಚಿಕೆ ಜಾಗಕ್ಕೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ 36 ಎಂಎನ್‌ಜೆ 2009, ದಿನಾಂಕ:20–02–2009 ರಂತೆ ಚದರ ಮೀಟರ್ ಒಂದಕ್ಕೆ ರೂ.200/– ಗಳಂತೆ ಕ್ರಯದ ಮೊತ್ತ ಈಗಾಗಲೇ ಕ್ರಯದ ಮೊಬಲಗು ಪಾವತಿಸಿಕೊಳ್ಳಲಾಗಿರುತ್ತದೆಂದು ವಲಯಾಧಿಕಾರಿಗಳು ವರದಿಸಿರುತ್ತಾರೆ. ಶ್ರೀಮತಿ. ತಿರುಪಾಲಮ್ಮ ನಿವೃತ್ತ ಪೌರ ಕಾರ್ಮಿಕರು ಹಾಗೂ ಶ್ರೀ ಎಂ.ಸಿ.ರಾಜು ನಿವೃತ್ತ ಪೌರ ಕಾರ್ಮಿಕರ ಮಗ ಇವರುಗಳಿಗೆ ಹಾಲಿ ಹಂಚಿಕೆ ಮಾಡಿರುವ ಜಾಗದ ಪೂರ್ವ–ಪಶ್ಚಿಮ 11x36.5 ಅಡಿಗಳಿಂದ 20x36.5 ಅಡಿಗಳಿಗೆ ತಿದ್ದುಪಡಿ ಸ್ವಾಧೀನಪತ್ರ ನೀಡುವ ಬಗ್ಗೆ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಿರುತ್ತಾರೆ.

ಆದರೆ, ನಅಇ 36 ಎಂಎನ್‌ಜೆ 2009, ದಿನಾಂಕ:20–02–20119ರ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 176 ಸಿಎಸ್‌ಎಸ್ 2010, ಬೆಂಗಳೂರು ದಿನಾಂಕ: 21–01–2011 ರಂದು ಹಿಂಪಡೆದಿರುವುದರಿಂದ, ಘೋಷಿತವಲ್ಲದ ಪಾಲಿಕೆ ಆಸ್ತಿಯಲ್ಲಿ ಹಕ್ಕುಪತ್ರ ನೀಡಲು ಅವಕಾಶವಿಲ್ಲದಿದ್ದಾಗ್ಯೂ, ಎ3/ಪಿಆರ್/ಕಂ.ಅ/ಪಿಆರ್/104/12–13, ದಿನಾಂಕ:30–11–2014 ರಂದು ಸ್ವಾಧೀನಪತ್ರ ನೀಡಲಾಗಿದ್ದರು ಸಹಾ ಪುನಃ ತಿದ್ದುಪಡಿ ಸ್ವಾಧೀನಪತ್ರ ನೀಡಲು ಕೋರಿರುತ್ತಾರೆ.

ಆಸ್ತಿ ಶಾಖೆಯ ಭೂಮಾಪಕರು ವರದಿಸಿರುವಂತೆ ಇಎಸ್‌ಐ ಕ್ವಾಟ್ರಸ್ ಹಾಗೂ ಬಿಬಿಎಂಪಿಯ ಶಿಶುವಿಹಾರವಿದ್ದು, ಇವರೆಡರ ನಡುವೆ ಎ.ಸಿ.ಶೀಟ್ ಹೊದಿಸಿರುವ ಕಟ್ಟಡದ ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿರುವುದಾಗಿ ವರದಿಯಾಗಿರುವುದರಿಂದ, ವಾಸ್ತವಾಂಶದ ವಿವರಗಳೊಂದಿಗೆ ಸ್ಥಾಯಿ ಸಮಿತಿಗಳು, ಬಿಬಿಎಂಪಿ ಸಭೆ ಮುಖಾಂತರ ಸೂಕ್ತ ತೀರ್ಮಾನಕ್ಕಾಗಿ ಸರ್ಕಾರದ ಅನುಮೋದನೆಗೆ ಪ್ರಸ್ತಾಪಿಸುವ ಸಲುವಾಗಿ ಮಂಡಿಸಿರುವ **ಆಯುಕ್ತರ ದಿನಾಂಕ: 31.10.2017ರ ಟಿಪ್ಪಣೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25–11–2017ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 31.10.2017ರ ಟಿಪ್ಪಣಿಯಲ್ಲಿ ತಿಳಿಸಿರುವ ಹೆಚ್ಚುವರಿ ವಿಸ್ತೀರ್ಣಕ್ಕೆ ಸರ್ಕಾರದ ಅನುಮೋದನೆಯೊಂದಿಗೆ ಕ್ರಯಪತ್ರ ನೀಡಲು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

***20]. ವಿಷಯದ ಸಂಖ್ಯೆ: ತೆಲಆಸ್ವಾಸ/ 177 /2017-18***

ಆಯುಕ್ತರ ದಿನಾಂಕ: 19-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಈ ಕೆಳಗಿನ ವಾರ್ಡ್‌ಗಳಲ್ಲಿ ಮೇಲ್ಕಂಡ ಸಾರ್ವಜನಿಕ ಉದ್ದೇಶಗಳಿಗಾಗಿ ವಿವಿಧ ಕಾಮಗಾರಿ/ನಿರ್ಮಾಣಗಳನ್ನು ಪಾಲಿಕೆಯು ಕೈಗೊಂಡಿದ್ದು, ಈ ಸಂಬಂಧ ಸಾರ್ವಜನಿಕರ ಸ್ವತ್ತುಗಳಲ್ಲಿ ಭಾಗಶ: ಜಾಗವನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ರೀತಿ ಉಪಯೋಗಿಸಿಕೊಂಡು ಧೀರ್ಘಾವಧಿಯಾಗಿದ್ದು, ಸ್ವತ್ತಿನ ಮಾಲೀಕರಿಗೆ ಯಾವುದೇ ರೀತಿಯ ಪರಿಹಾರ ಲೆಕ್ಕಾಚಾರ ಮಾಡದೇ ಇದ್ದು, ಪರಿಹಾರವನ್ನು ನಿಡದೇ ಇದ್ದುದರಿಂದ ವಿವಿಧ ನ್ಯಾಯಾಲಯಗಳಲ್ಲಿ ಉಚ್ಚನ್ಯಾಯಾಲಯದಲ್ಲಿ ವ್ಯಾಜ್ಯಗಳು ಉಂಟಾಗಿರುತ್ತದೆ. ನ್ಯಾಯಾಲಯಗಳು ಈ ಸಂಬಂಧ ಸ್ವತ್ತಿನ ಮಾಲೀಕರು ಕಳೆದು ಕೊಂಡಿರುವ ಸ್ವತ್ತಗಳಿಗೆ ಸೂಕ್ತ ಪರಿಹಾರ ನೀಡುವಂತೆ ನಿರ್ದೇಶನವನ್ನು ನೀಡಿರುತ್ತದೆ. ಈ ಕೆಳಕಂಡ ವಿವಿಧ ಪ್ರಕರಣಗಳಲ್ಲಿ ವಿಚಾರಣೆ ನಡೆದು ಅಭಿಯಂತರರ ವಿಭಾಗವು ಪರಿಹಾರದ ಮೊತ್ತವನ್ನು ಅಂದಾಜಿಸಿ ವರದಿಯನ್ನು ನೀಡಿದ್ದು, ಭೂಸ್ವಾಧೀನಾಧಿಕಾರಿಗಳು ಪರಿಶೀಲನೆ ನಡೆಸಿರುತ್ತಾರೆ.

ಈ ಸ್ವತ್ತುಗಳನ್ನು ಉಪಯೋಗಿಸಿಕೊಂಡು ಬಹಳ ಕಾಲವಾಗಿದ್ದು, ಭೂಸ್ವಾಧೀನ ಕಾನೂನಿನಂತೆ ಪ್ರಕ್ರಿಯೆ ನಡೆಸಿ ಪರಿಹಾರ ವಿತರಣೆ ಮಾಡಲು ಧೀರ್ಘಾವಧಿಕಾಲ ತೆಗೆದುಕೊಳ್ಳುವುರಿಂದಲೂ ಹಾಗೂ ನ್ಯಾಯಾಲಯಗಳ ಆದೇಶಗಳನ್ನು ಪಾಲಿಸುವುದು ಅಗತ್ಯವಿರುವುದರಿಂದಲೂ ಈ ಪ್ರಕರಣಗಳಲ್ಲಿ ಪರಿಹಾರವನ್ನು ಕೆ.ಎಂ.ಸಿ ಕಾಯ್ದೆ-1976 ಸೆಕ್ಷನ್ 175 ರ ಅನ್ವಯ ದರ ನಿಗಧಿಪಡಿಸಿ ಸರ್ಕಾರದ ಅನುಮತಿ ಪಡೆದು ಪರಿಹಾರ ಪಾವತಿಸಲು ಕ್ರಮಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತದೆ.

ಈ ಪ್ರಕರಣಗಳಲ್ಲಿ ಸ್ವತ್ತನ್ನು ಬಹಳ ಹಿಂದೆಯೇ ಪಾಲಿಕೆಯು ಉಪಯೋಗಿಸಿಕೊಂಡಿದ್ದು, ಒಂದು ವೇಳೆ ಭೂಸ್ವಾಧೀನ ಕಾನೂನಿನಂತೆ ಪರಿಹಾರ ಪಾವತಿಸುವ ದಿನದವರೆಗೆ ಧೀರ್ಘಾವಧಿಗೆ ಪರಿಹಾರದ ಮೊತ್ತದ ಮೇಲೆ ಶೇ.100%ರಷ್ಟು ಶಾಸನಬದ್ಧ ಭತ್ಯೆ **(SOLATIUM)** ಹಾಗೂ ಹೆಚ್ಚುವರಿ ಮಾರುಕಟ್ಟೆ ಬೆಲೆ ಎಂದು ಶೇ.12%ರಷ್ಟು ಪರಿಹಾರದ ಮೊತ್ತಗಳನ್ನು ನೀಡಬೇಕಾಗುತ್ತಿದ್ದು, ಇವೆಲ್ಲವನ್ನು ಒಟ್ಟುಗೂಡಿಸಿದ್ದಲ್ಲಿ ಪಾಲಿಕೆಯಿಂದ ಪಾವತಿಸುವ ಪರಿಹಾರ ಮೊತ್ತವು ಬೃಹತ್ ಪ್ರಮಾಣವಾಗುವುದರಿಂದ ಇದು ಪಾಲಿಕೆಗೆ ಆರ್ಥಿಕ ಹೊರೆಯನ್ನು ಹಾಗೂ ನಷ್ಟವನ್ನು ಉಂಟು ಮಾಡುವುದನ್ನು ತಪ್ಪಿಸುವ ಸಲುವಾಗಿ ಭೂಮಾಲೀಕರೊಂದಿಗೆ ದರಸಂಧಾನ ಮಾಡುವುದು ಸೂಕ್ತವಾಗಿರುತ್ತದೆ ಎಂದು ನಿಶ್ಚಯಿಸಲಾಗಿರುತ್ತದೆ.

ಮಾನ್ಯ ಆಯುಕ್ತರ ಹಿಂದಿನ ಸುತ್ತೋಲೆಯಂತೆ ಇಂತಹ ಪ್ರಕರಣಗಳಲ್ಲಿ ಕೆ.ಎಂ.ಸಿ ಕಾಯ್ದೆ-1976 ಸೆಕ್ಷನ್ 175 ರಡಿ ಕ್ರಮಕೈಗೊಳ್ಳುವ ಪೂರ್ವದಲ್ಲಿ ಪಾಲಿಕೆಯಲ್ಲಿ ರಚಿಸಲಾದ ದರಸಂಧಾನ ಸಮಿತಿಯರವರು ಭೂಮಾಲೀಕರೊಂದಿಗೆ ಪರಸ್ಪರ ಚರ್ಚೆ ನಡೆಸಿ ಪ್ರಸ್ತುತ ಸರ್ಕಾರದಿಂದ ಅಂಗೀಕೃತವಾದ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಪರಿಹಾರದ ಮೊತ್ತವನ್ನು ಒಮ್ಮತದಿಂದ ತೀರ್ಮಾನಿಸಲು ನಿಶ್ಚಯಿಸಲಾಗಿದೆ. ಅದರಂತೆ ದಿ:23-08-2017 ರಂದು ದರಸಂಧಾನ ಸಮಿತಿಯು ಸಭೆ ನಡೆಸಿ ತೀರ್ಮಾನ ಕೈಗೊಂಡಿರುತ್ತದೆ ಹಾಗೂ ಸದರಿ ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳು ಹಾಗೂ ಸಂಬಂಧಿಸಿದ ಸ್ವತ್ತಿನ ಮಾಲೀಕರು ಕೂಡ ತಮ್ಮ ಅನುಮೋದನೆಯನ್ನು ಹಾಗು ಸಮ್ಮತಿಯನ್ನು ನೀಡಿರುತ್ತಾರೆ.

**ಭೂಸ್ವಾಧೀನಪಡಿಸಿಕೊಂಡ ಸ್ವತ್ತಿನ ವಿವರ ಹಾಗೂ ಕಾಮಗಾರಿಯ ವಿವರ ಹಾಗೂ ಚ.ಅಡಿಗೆ ನಿಶ್ಚಯಿಸಲಾದ ಪರಿಹಾರದ ಮೊತ್ತ ಈ ಕೆಳಗಿನಂತಿರುತ್ತದೆ.**

1. ಯಶವಂತಪುರ ಮೇಲ್ಸೆತುವೆ ನಿರ್ಮಾಣ ಕಾಮಗಾರಿ ಹಾಗೂ ಸರ್ವೀಸ್ ರಸ್ತೆ ಅಗಲೀಕರಣ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.7060/- ಇದ್ದು ಸದರಿ ಮಾರ್ಗಸೂಚಿ ದರಂತೆ ಭೂಮಾಲೀಕರಿಗೆ ಪರಿಹಾರ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ.

2. ಸಾರಕ್ಕಿ ಗ್ರಾಮದ ಸರ್ವೆ ನಂ.57 ರಲ್ಲಿ ಶಾಖಾಂಬರಿನಗರ ನಿವೇಶನ ಸಂಖ್ಯೆ:34 ರಸ್ತೆ ಅಗಲೀಕರಣ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.4858/- ಇದ್ದು ಸದರಿ ಮಾರ್ಗಸೂಚಿ ದರಂತೆ ಹಾಗೂ ಶೇ20% ರಷ್ಟು ಹೆಚ್ಚಿನ ಪರಿಹಾರ ಭೂಮಾಲೀಕರಿಗೆ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ.

3. ನಾಯಂಡಹಳ್ಳಿ ಗ್ರಾಮ ಸರ್ವೆನಂ.43/2 ರಲ್ಲಿನ ಖಾಸಗಿ ಸ್ವತ್ತಿನಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.2800/- ಇದ್ದು ಸದರಿ ಮಾರ್ಗಸೂಚಿ ದರಂತೆ ಹಾಗೂ ಶೇ20% ರಷ್ಟು ಹೆಚ್ಚಿನ ಪರಿಹಾರ ಭೂಮಾಲೀಕರಿಗೆ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ

4. ಅರಮನೆ ರಸ್ತೆಯಲ್ಲಿ ಆಸ್ತಿ ಸಂಖ್ಯೆ:45/1, 45/2 ರಲ್ಲಿನ ಭೂಸ್ವಾಧೀನ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.18506/- ಇದ್ದು ಸದರಿ ಮಾರ್ಗಸೂಚಿ ದರಂತೆ ಭೂಮಾಲೀಕರಿಗೆ ಪರಿಹಾರ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ.

5. ಕೆಂಗೇರಿ ಉಪ ವಲಯದ ಮೇಗಳ ಬೀದಿ ನಿವೇಶನ ಸಂಖ್ಯೆ:551 ರಲ್ಲಿ ಒಳಚರಂಡಿ/ಕುಡಿಯುವ ನೀರಿನ ಪೈಪ್ ಅಳವಡಿಸುವ ಕಾಮಗಾರಿ ಬಗ್ಗೆ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.2500/- ಇದ್ದು ಸದರಿ ಮಾರ್ಗಸೂಚಿ ದರಂತೆ ಹಾಗೂ ಶೇ20% ರಷ್ಟು ಹೆಚ್ಚಿನ ಪರಿಹಾರ ಭೂಮಾಲೀಕರಿಗೆ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ.

6. ಮೈಸೂರು ಮುಖ್ಯರಸ್ತೆ ಅಗಲೀಕರಣಕ್ಕಾಗಿ ಸ್ವತ್ತಿನ ಸಂಖ್ಯೆ:41-1-336, ಸಿಟಿಎಸ್ ನಂ.621 ರಲ್ಲಿ ಸ್ವತ್ತಿನ ಸ್ವಾಧೀನ:- ಈ ಪ್ರಕರಣದಲ್ಲಿ 2016-17 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ ದರವು ಚ.ಅಡಿ 1ಕ್ಕೆ ರೂ.9020/- ಇದ್ದು ಸದರಿ ಮಾರ್ಗಸೂಚಿ ದರಂತೆ ಹಾಗೂ ಶೇ20% ರಷ್ಟು ಹೆಚ್ಚಿನ ಪರಿಹಾರ ಭೂಮಾಲೀಕರಿಗೆ ನೀಡಲು ದರ ಸಂಧಾನ ಸಮಿತಿಯು ತೀರ್ಮಾನಿಸಿರುತ್ತದೆ.

ಮೇಲ್ಕಂಡ 6 ವಿವಿಧ ಭೂಸ್ವಾಧೀನ ಪ್ರಕರಣಗಳಲ್ಲಿ ಭೂಮಾಲೀಕರ ಹೆಸರು ಸ್ವತ್ತಿನ ವಿವರ ಸ್ವತ್ತಿನ ವಿಸ್ತೀರ್ಣ ಚಕ್ಕುಬಂದಿ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣ ಹಾಗೂ ಮೇಲ್ಕಂಡ ದರಸಂಧಾನ ಸಭೆಯ ನಿರ್ಣಯದಂತೆ ನೀಡಬೇಕಾದ ಪರಿಹಾರದ ಮೊತ್ತ ವಿವರಗಳನ್ನು ಈ ಕೆಳಕಂಡ ತ:ಖ್ತೆಯಲ್ಲಿ ನಮೂದಿಸಲಾಗಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:45 (ಹಳೇವಾರ್ಡ್ ನಂ.7) ಮಲ್ಲೇಶ್ವರಂ ವ್ಯಾಪ್ತಿಯಲ್ಲಿ ಬರುವ ಯಶವಂತಪುರ ಮೇಲುಸೇತುವೆ ನಿರ್ಮಾಣ ಕಾಮಗಾರಿಗಾಗಿ ಹಾಗೂ ಸರ್ವೀಸ್ ರಸ್ತೆ ಅಗಲೀಕರಣಕ್ಕಾಗಿ ಈಗಾಗಲೇ ಸ್ವಾಧೀನಪಡಿಸಿಕೊಮಡಿರುವ 18 ಸ್ವತ್ತುಗಳ ಪೈಕಿ 8 ಸ್ವತ್ತುಗಳಲ್ಲಿ ಹೆಚ್ಚುವರಿ ವಿಸ್ತೀರ್ಣ:1397.44 ಚ.ಅಡಿ ಹಾಗೂ ಪ್ರಸ್ತಾಪಿತ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವ ವಿಸ್ತೀರ್ಣ 727.75 ಚ.ಅಡಿ ಒಟ್ಟು 2124.75 ಚ.ಅಡಿ ಜಾಗವನ್ನು 2012ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರು:-

| ಕ್ರ. ಸಂ. | ಸಿಟಿಎಸ್ ಸಂಖ್ಯೆ | ಸ್ವತ್ತಿನ ಸಂಖ್ಯೆ | ನಗರ ಮಾಪನ ದಾಖಲೆಯಂತೆ ಹೆಸರು | ಸರ್ವೀಸ್ ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿಕೊಂಡಿರುವ ಹೆಚ್ಚುವರಿ ವಿಸ್ತೀರ್ಣ (ಚ.ಅಡಿ) | ಪರಿಹಾರದ ಮೊತ್ತ | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|---|---|
| 1 | 70/ಎ ಪೈಕಿ | 88 | ಆರ್. ವೆಂಕಟೇಶ್ | 174.6 | 12,32,852/- | 2124.75 x 7060=1,50,00,735 |
| 2 | 70/ಬಿ | 87 | ಮೇರಿ ವಸಂತ ಜೋಸೆಫ್ | 174.6 | 12,32,852/- | |
| 3 | 70/ಸಿ | 86 | ಬಿ.ಎಸ್. ಧನಲಕ್ಷ್ಮೀ | 174.6 | 12,32,852/- | |
| 4 | 70/ಡಿ | 83 | ಸಿ.ಎಸ್.ಶೈಲಜಾ | 174.6 | 12,32,852/- | |
| 5 | 70/ಇ | 82 | ಬಿ.ಕ್ಯಾಸ್ಪರ್ | 174.6 | 12,32,852/- | |
| 6 | 70/ಎಫ್ | 81 | ಬಿ.ಕ್ಯಾಸ್ಪರ್ | 174.6 | 12,32,852/- | |
| 7 | 70/ಜಿ | 80 | ಬಿ.ಜೆ.ಅಮೃತ್ ರಾಜ್ | 174.6 | 12,32,852/- | |
| 8 | 70/ಐ | 73 | ಬಿ.ದೋಬೀಸ್ | 174.6 | 12,32,852/- | |
| 9 | 70/ಹೆಚ್ | 79 | ಆಲ್ಬರ್ಟ್ ಜೋಸೆಫ್ | 727.75 | 51,37,915/- | |
| ಒಟ್ಟು | | | | **2,124.75** | | **1,50,007.35** |

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.179 ರ ವ್ಯಾಪ್ತಿಯಲ್ಲಿ ಬರುವ ಸಾರಕ್ಕಿ ಗ್ರಾಮದ ಸರ್ವೆನಂ.57 ರಲ್ಲಿನ ನಿವೇಶನ ಸಂಖ್ಯೆ:34 ರ ಪೈಕಿ 351 ಚ.ಅಡಿ ವಿಸ್ತೀರ್ಣವನ್ನು ರಸ್ತೆ ಅಗಲೀಕರಣ ಕಾಮಗಾರಿಗಾಗಿ 2002-03ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರು:-

| ಕ್ರ. ಸಂ. | ಸರ್ವೆ ನಂ. | ಸ್ವತ್ತಿನ ಸಂಖ್ಯೆ: | ನಗರ ಮಾಪನ ದಾಖಲೆಯಂತೆ ಹೆಸರು | ರಸ್ತೆಗಾಗಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ (ಚ.ಅಡಿ) | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|---|
| 1 | 57 | 34 | ಶ್ರೀಮತಿ ವಸಂಧರಾ ದೇವಿ ಕೋಂ ಪರಮಶಿವಯ್ಯ | 351 | 351 ಚ.ಅಡಿ x ರೂ.4858= ರೂ.17,05,158+20% ಹೆಚ್ಚಿನ ಪರಿಹಾರ ರೂ.3,41,031 ಒಟ್ಟು 20,46,189/- |

3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:131 ರ ವ್ಯಾಪ್ತಿಯಲ್ಲಿ ಬರುವ ನಾಯಂಡಹಳ್ಳಿ ಗ್ರಾಮದ ಸರ್ವೆನಂ.42/3 ರಲ್ಲಿನ ಖಾಸಗಿ ಸ್ವತ್ತಿನಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಾಗಿ 15246 ಚ.ಅಡಿ ವಿಸ್ತೀರ್ಣವನ್ನು 2013ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರು:-

ಈ ಸ್ವತ್ತುದಾರರಿಗೆ ಪರಿಹಾರವನ್ನು ತುರ್ತಾಗಿ ವಿತರಿಸುವಂತೆ ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:31157/2014, ದಿ:28-10-2014 ರಂತೆ ತೀರ್ಪು ನೀಡಿರುತ್ತದೆ.

| ಕ್ರ. ಸಂ. | ಸರ್ವೆ ನಂ. | ಸ್ವತ್ತಿನ ಸಂಖ್ಯೆ: | ನಗರ ಮಾಪನ ದಾಖಲೆಯಂತೆ ಹೆಸರು | ರಸ್ತೆಗಾಗಿ ಹಾಗೂ ಚರಂಡಿ ನಿರ್ಮಾಣಕ್ಕಾಗಿ ಉಪಯೋಗಿಸಿ ಕೊಂಡಿರುವ ವಿಸ್ತೀರ್ಣ (ಚ.ಅಡಿ) | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|---|
| 1 | 43/2 | – | ಪಿಳ್ಳಪ್ಪ ಉರುಫ್ ತಮ್ಮಯ್ಯ ಬಿನ್ ಲೇ॥ಪೆರಿಯಣ್ಣ ಉರುಫ್ ಅಬ್ಬಯ್ಯ | 15246 ಚ.ಅಡಿ (14 ಗುಂಟೆ) | 15246 ಚ.ಅಡಿ x ರೂ.2800= ರೂ.4,26,88,800+20% ಹೆಚ್ಚಿನ ಪರಿಹಾರ ರೂ.85,37,760/– ಒಟ್ಟು ರೂ.5,12,26,560/– |

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:110 ರ ವ್ಯಾಪ್ತಿಯಲ್ಲಿ ಬರುವ ಅರಮನೆ ರಸ್ತೆಯಲ್ಲಿನ ಆಸ್ತಿ ಸಂಖ್ಯೆ:45/1 ಮತ್ತು 45/2 ರಲ್ಲಿ 5807 ಚ.ಅಡಿ ಜಾಗವನ್ನು ಪ್ಯಾಲೇಸ್ ರಸ್ತೆ ಅಗಲೀಕರಣಕ್ಕೆ 2008–09ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರುಗಳು

ಈ ಸ್ವತ್ತುದಾರರಿಗೆ ಪರಿಹಾರವನ್ನು ತುರ್ತಾಗಿ ವಿತರಿಸುವಂತೆ ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:58912/2013, ದಿ:28–03–2016 ರಂತೆ ತೀರ್ಪು ನೀಡಿರುತ್ತದೆ.

| ಸ್ವತ್ತಿನ ಸಂಖ್ಯೆ | ಸ್ವತ್ತಿನ ಖಾತೆ ಸಂಖ್ಯೆ ಮತ್ತು ಖಾತೆದಾರರ ಹೆಸರು ಲಾಲೇಹಜಾರೇ ವಸತಿ ಅಪಾರ್ಟ್‌ಮೆಂಟ್‌ನ ಹಕ್ಕುದಾರರು | ಸ್ವತ್ತಿನ ಒಟ್ಟು ವಿಸ್ತೀರ್ಣ | ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿ ಕೊಂಡಿರುವ ವಿಸ್ತೀರ್ಣ | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|
| 45/1 | 1) 45/1: ಮಂದೆಪಂದ ಅಪ್ಪಯ್ಯ ಗಣಪತಿ ಮತ್ತು ವನಿತ ಗಣಪತಿ<br>2) 45/1–1: 1) ಪ್ರಿಯಾ ಚೆಟ್ಟಿ 2)ಮಲ್ಲಿಕಾರ್ಜುನನ್ ರಾಜಗೋಪಾಲ್<br>3) 45/1–2: ಜಿ.ಶ್ವೇತಾ<br>4) 45/1–3:ಜಿ.ಕಿರಿಟಿ<br>5) 45/1–4:ಅತುಲ್‌ಗಾಲ<br>6) 45/1–5:ನಳಿನಿ ಪ್ರಭು<br>7) 45/1–6:ಶ್ರೀಮತಿ ಜ಼ಹರಾ ಬಾನೋ ಖಲೀಲಿ<br>8) 45/1–7:ಮಹಮ್ಮದ್‌ಸಾದ್ವಿಕ್ ಖಲೀಲಿ<br>9) 45/1–8: ಮಹೇಶ್ ಎನ್. ಮದ್ವಾನಿ<br>10) 45/1–9:ಶ್ರೀಮತಿ.ಅರುಣ ವಸಂತನ್<br>11) 45/1–10: ಜಗದೀಶ್ ಲಚ್ಮನ್‌ದಾಸ್ ಮತ್ತು ಶ್ರೀಮತಿ ದೀಪ.ಜೆ.ಕೆ<br>12) 45/1–11: ಮಹಮ್ಮದ್ ಜ಼ಾಕಿ ಖಲೀಲಿ<br>13) 45/1–12:ಗಿರೀಶ್ ಕುಮಾರ್ ಸಿಂಗ್ ಚೌಧರಿ<br>14) 45/1–13:ಎಸ್.ಎಲ್.ಧರ್ಮೇಗೌಡ ಮತ್ತು ಶ್ರೀಮತಿ ಮಮತ.ಎಂ<br>15) 45/1–14:ಶೀಲಾ ವಿ. ಬಂಗೇರ<br>16) 45/1–15:ಶ್ರೀಮತಿ ಸರೋಜಿನಿ ಆರ್.ಪಿಳ್ಳೈ<br>17) 45/1–16:ಶ್ರೀಕುಮಾರ್ ಲಕೋಟಿಯ<br>18) 45/1–17:ಮೆ॥ಹಾರ್‌ಮೊನಿ ಸಿಲ್ಕ್ಸ | 26972 ಚ.ಅ. | 211.50 ಚ.ಮೀ (2276.58 ಚ.ಅ.) | ಚ.ಅಡಿ 5807.1 ಘ ರೂ.18506=ರೂ. 10,74,64,342/– |

| | | | | |
|---|---|---|---|---|
| | ಪ್ರೈವೇಟ್ ಲಿಮಿಟೆಡ್.<br>19) 45/1-18:ಸುಹೈಲ್ ಸೈಯದ್ ಮತ್ತು ಮರಿಯಮ್ ಸುಹೈಲ್<br>20) 45/1-19:ಮೊಯೀನ್ ಖಲೀಲಿ<br>21) 45/1-19-1:ಎ.ಎನ್. ಜಯರಾಂ ಮತ್ತು ಮಾಳವಿಕ ಜಯರಾಂ<br>22) 45/1-20:ಮೆ:ಹೈವೇ ಹೋಟೆಲ್ ಲಿಮಿಟೆಡ್<br>23) 45/1-21:ಶ್ರೀಮತಿ ನಫೀಸಾ ಸಾದಿಕ್ ಖಲೀಲಿ | | | |
| 45/2 | ಮಹಮ್ಮದ್ ಸಾದಿಕ್ ಖಲೀಲಿ ಮತ್ತು ಹೈಪಾಯಿಂಟ್-4 ಅಸೋಸಿಯೇಷನ್ | 26746 ಚ.ಅಡಿ | 328.11 ಚ.ಮೀ. (3531.36 ಚ.ಅ.) | - |
| **ಒಟ್ಟು** | | **5,807** | | **10,74,64,342/-** |

5. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:7 ರ ವ್ಯಾಪ್ತಿಯಲ್ಲಿ ಬರುವ ಕೆಂಗೇರಿ ಉಪಯ ವಲಯದ ಮೇಗಳ ಬೀದಿ, ನಿವೇಶನ ಸಂಖ್ಯೆ:511 ರ ಪೈಕಿ1125 ಚ.ಅಡಿ ಜಾಗವನ್ನು ಒಳಚರಂಡಿ/ಕುಡಿಯು ನೀರಿನ ಪೈಪುಗಳನ್ನು ಅಳವಡಿಸಲು ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರು:-

| **ಕ್ರ. ಸಂ.** | **ಸರ್ವೆ ನಂ.** | **ಸ್ವತ್ತಿನ ಸಂಖ್ಯೆ:** | **ನಗರ ಮಾಪನ ದಾಖಲೆಯಂತೆ ಹೆಸರು** | **ರಸ್ತೆಗಾಗಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ (ಚ.ಅಡಿ)** | **ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ.** |
|---|---|---|---|---|---|
| 1 | - | 511 | ಶ್ರೀಮತಿ ಮುನವಾರ್ ಸುಲ್ತಾನ್ | 1125 | 1125 ಚ.ಅಡಿ ಘರೂ.2500=ರೂ.28,12,500+20% ಹೆಚ್ಚಿನ ಪರಿಹಾರ ರೂ.5,62,500/-ಒಟ್ಟು 33,75,000/- |

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:133 ರ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ:41-1-336 ಸಿಟಿಎಸ್.ನಂ.621 ರಲ್ಲಿ 124.08 ಚ.ಮೀ (1335 ಚ.ಅಡಿ) ಜಾಗವನ್ನು ಮೈಸೂರು ಮುಖ್ಯರಸ್ತೆಯ ಅಗಲೀಕರಣಕ್ಕಾಗಿ 2014ನೇ ಸಾಲಿನಲ್ಲಿ ಉಪಯೋಗಿಸಿಕೊಂಡಿರುವ ವಿಸ್ತೀರ್ಣ ಮತ್ತು ಸ್ವತ್ತುದಾರರ ಹೆಸರು

| **ಕ್ರ. ಸಂ.** | **ಸರ್ವೆ ನಂ.** | **ಸ್ವತ್ತಿನ ಸಂಖ್ಯೆ:** | **ನಗರ ಮಾಪನ ದಾಖಲೆಯಂತೆ ಹೆಸರು** | **ರಸ್ತೆಗಾಗಿ ಉಪಯೋಗಿಸಿ ಕೊಂಡಿರುವ ವಿಸ್ತೀರ್ಣ (ಚ.ಅಡಿ)** | **ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ.** |
|---|---|---|---|---|---|
| 1 | 621 | 41-1-336 | ಶ್ರೀ.ಬಾಸ್ಕರ್ ಬಿನ್ ಲೇ॥ಬಿ.ಎ.ಪೂಜಯ್ಯ | 1335 ಚ.ಅಡಿ) | 1335 ಚ.ಅಡಿX ರೂ.9020=ರೂ.1,20,41,700+20% ಹೆಚ್ಚಿನ ಪರಿಹಾರ ರೂ.24,08,340/- ಒಟ್ಟು 1,44,50,040/- |

ದಿನಾಂಕ: 23-08-2017 ರಂದು ಒಟ್ಟು ಇಂತಹ ಉಪಯೋಗಿಸಿಕೊಂಡ 7 ಪ್ರಕರಣಗಳಿದ್ದು, ಅವುಗಳಲ್ಲಿ ಕ್ರಮಸಂಖ್ಯೆ:7ರಲ್ಲಿ ವಾರ್ಡ್ ಸಂಖ್ಯೆ:102 ಸಾಣೆಗೊರವನಹಳ್ಳಿ ಸರ್ವೆನಂ.46 ರಲ್ಲಿ ನಿವೇಶನ ಸಂಖ್ಯೆ:947 ರಲ್ಲಿ 1200 ಚ.ಅಡಿ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಈವರೆಗೂ ಪರಿಹಾರ ಪಾವತಿಸದ ಕಾರಣ

ನ್ಯಾಯಾಲಯದಿಂದ ಡಿಕ್ರಿಯಾಗಿ ಪಾಲಿಕೆ ಪಿಠೋಪಕರಣ/ವಾಹನ ಇತ್ಯಾದಿ ಚರಾಸ್ತಿ ಮುಟ್ಟುಗೋಲು ಹಾಕಿ ಜಪ್ತಿ ಆದೇಶ ಕೈಕೊಳ್ಳುವ ಪ್ರಕ್ರಿಯೆ ನಡೆದಿದ್ದು ಇದನ್ನ ತಪ್ಪಿಸಿ ತುರ್ತಾಗಿ ಪರಿಹಾರ ನೀಡಲು ಕ್ರಮಕೈಗೊಂಡು ಪಾಲಿಕೆಯ ಕೌನ್ಸಿಲ್ ಹಾಗೂ ಸ್ಥಾಯಿಸಮಿತಿಗಳ ನಿರ್ಣಯಕ್ಕೆ ಪ್ರತ್ಯೇಕವಾಗಿ ಮಂಡಿಸಿದೆ.

ಉಳಿದಂತೆ 6 ಪ್ರಕರಣಗಳಲ್ಲಿ ಪಾಲಿಕೆಯು ಉಪಯೋಗಿಸಿಕೊಂಡು ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಿದ ಖಾಸಗಿ ಸ್ವತ್ತುಗಳಿಗೆ ದರಸಂಧಾನ ಸಮಿಯಲ್ಲಿ ಸಂಬಂಧಿಸಿದ ಸ್ವತ್ತಿನ ಮಾಲೀಕರೊಂದಿಗೆ ಸಭೆಯನ್ನ ಏರ್ಪಡಿಸಿ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಪಾಲಿಕೆಯ ಅಧಿಕಾರಿಗಳು ಕಾನೂನುಕೋಶದ ಮುಖ್ಯಸ್ಥರು ಪರಸ್ಪರ ಚರ್ಚಿಸಿ ದರಸಂಧಾನ ನಡೆಸಿ ಚ.ಅಡಿಗೆ ಸರ್ಕಾರವು ಈಗಾಗಲೇ ನಿಗಧಿಪಡಿಸಿದ ಮಾರುಕಟ್ಟೆಯ ಮಾರ್ಗದರ್ಶಿ ಮೌಲ್ಯಕ್ಕೆ ಸಮನಾದಷ್ಟು ಮೊತ್ತಕ್ಕೆ ಪರಿಹಾರ ದರ ನಿಗಧಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಕೆಲವು ವಿಶೇಷ ಪ್ರಕರಣಗಳಲ್ಲಿ ಪರಿಹಾರ ಪಾವತಿಸಲು ಆದ ಧೀರ್ಘಾವಧಿ, ವಿಳಂಬ ಆಸ್ತಿ ಕಳೆದುಕೊಂಡ ಹಕ್ಕುದಾರರ ಸಂಖ್ಯೆ ಇತ್ಯಾದಿ ಪರಿಗಣಿಸಿ ನಿಗಧಿಪಡಿಸಿದ ಪರಿಹಾರದ ಮೊತ್ತದ ಮೇಲೆ ಶೇ.20% ಹೆಚ್ಚುವರಿ ಪರಿಹಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಪರಿಹಾರದ ಮೊತ್ತ ಘೋಷ್ವಾರೆ ಈ ಕೆಳಗಿನಂತಿದೆ.

| ಕ್ರ. ಸಂ. | ವಾರ್ಡ್ ಸಂಖ್ಯೆ: | ಕಾಮಗಾರಿ ವಿವರ | ಉಪಯೋಗಿಸಿಕೊಂಡ ಭೂಮಿಯ ವಿಸ್ತೀರ್ಣ ಚ.ಅಡಿಗಳಲ್ಲಿ | ದರಸಂಧಾನ ಸಮಿತಿಯು ನಿಗಧಿಪಡಿಸಿದ ದರ ಚ.ಅಡಿಗೆ ರೂ. | ನಿಗಧಿಪಡಿಸಿದ ಪರಿಹಾರ ಮೊತ್ತ | ಪರಿಹಾರ ಮೊತ್ತದ ಮೇಲೆ ಶೇ.20 ಹೆಚ್ಚುವರಿ ಪರಿಹಾರ | ಒಟ್ಟು ಪಾವತಿಸತಕ್ಕ ಪರಿಹಾರದ ಮೊತ್ತ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | 45 | ಯಶವಂತಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಹಾಗೂ ಸರ್ವೀಸ್ ರಸ್ತೆ ಅಗಲೀಕರಣ:- | 2124.75 | 7.060/- | 1,50,00,735/- | ಇಲ್ಲ | 1,50,00,735/- |
| 2 | 179 | ಸಾರಕ್ಕಿ ಗ್ರಾಮದ ಸರ್ವೆ ನಂ.57 ರಲ್ಲಿ ಶಾಖಾಂಬರಿನಗರ ನಿವೇಶನ | 351 | 4,858/- | 17,05,158/- | 3,41,031/- | 20,46,189/- |
| 3 | 131 | ನಾಯಂಡಹಳ್ಳಿ ಗ್ರಾಮ ಸವೆನಂ.43/2ರಲ್ಲಿನ ಖಾಸಗಿ ಸ್ವತ್ತಿನಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಾಗಿ | 15246 (14 ಗುಂಟೆ) | 2,800/- | 4,26,88,800/- | 85,37,760/- | 5,12,26,560/- |
| 4 | 110 | ಅರಮನೆ ರಸ್ತೆಯಲ್ಲಿ ಆಸ್ತಿ ಸಂಖ್ಯೆ:45/1, 45/2 ರಲ್ಲಿನ ಲಾಲೇಹಜಾರೇ ವಸತಿ ಅಪಾರ್ಟ್‌ಮೆಂಟ್ ರಲ್ಲಿನ ಭೂಸ್ವಾಧೀನ | 5807 | 18,506/- | 10,74,64,342/- | ಇಲ್ಲ | 10,74,64,342/- |

| | | | | | | | |
|---|---|---|---|---|---|---|---|
| 5 | 7 | ಕೆಂಗೇರಿ ಉಪ ವಲಯದ ಮೇಗಳ ಬೀದಿ ನಿವೇಶನ ಸಂಖ್ಯೆ:551 ರಲ್ಲಿ ಒಳಚರಂಡಿ/ಕುಡಿಯುವ ನೀರಿನ ಪೈಪ್ ಅಳವಡಿಸುವ ಕಾಮಗಾರಿ ಬಗ್ಗೆ | 1125 | 2,500/- | 28,12,500/- | 5,62,500/- | 33,75,000/- |
| 6 | 133 | ಮೈಸೂರು ಮುಖ್ಯರಸ್ತೆ ಅಗಲೀಕರಣಕ್ಕಾಗಿ ಸ್ವತ್ತಿನ ಸಂಖ್ಯೆ:41-1-336, ಸಿಟಿಎಸ್ ನಂ.621 ರಲ್ಲಿ ಸ್ವತ್ತಿನ ಸ್ವಾಧೀನ | 1335 | 9,020/- | 1,20,41,700/- | 24,08,340/- | 1,44,50,040/- |
| | | **ಒಟ್ಟು** | **25988.75** | **-** | **18,17,13,235/-** | **1,18,49,631/-** | **19,35,62,866/-** |

ಈ ಹಿನ್ನಲೆಯಲ್ಲಿ ಕೆ.ಎಂ.ಸಿ ಕಾಯ್ದೆ 1976 ಕಲಂ-175 ಹಾಗೂ 270 ರ ಅಡಿಯಲ್ಲಿ ಕ್ರಮ ವಹಿಸುತ್ತಿರುವುದಾಗಿ ತಿಳಿಸಿರುವುದರಿಂದ ಸದರಿ ಮೇಲ್ಕಂಡ 6 ಪ್ರಕರಣಗಳಲ್ಲಿ ಒಳಗೊಂಡಿರುವ ಸ್ವತ್ತುದಾರರಿಗೆ ನಿಗಧಿಪಡಿಸುವ ಪರಿಹಾರವನ್ನು ಸಂಬಂಧಿಸಿದ ಎಲ್ಲ ಆಸ್ತಿಗಳ ಮಾಲೀಕರು ಒಪ್ಪಿರುವುದರಿಂದ, ಹಾಗೂ ಪರಿಹಾರದ ಮೊತ್ತ ನೀಡಲು ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಜಿಲ್ಲಾ ನ್ಯಾಯಾಲಯವು ವಿವಿಧ ಹಂತಗಳಲ್ಲಿ ಪ್ರತ್ಯೇಕ ಆದೇಶವನ್ನು ಮಾಡಿ ಸ್ವಾಧೀನಪಡಿಸಿಕೊಂಡ ಭೂಮಿಯ ಮಾಲೀಕರಿಗೆ ತುರ್ತಾಗಿ ಪರಿಹಾರ ಪಾವತಿಸುವಂತೆ ತೀರ್ಪು ನೀಡಿರುವುದರಿಂದ ತುರ್ತಾಗಿ ರೂ.19,35,62,866 (ಹತ್ತೊಂಭತ್ತು ಕೋಟಿ ಮೂವತ್ತೈದು ಲಕ್ಷ ಅರವತ್ತೆರಡು ಸಾವಿರದ ಎಂಟುನೂರ ಅರವತ್ತಾರು ಮಾತ್ರ) ಸಂಬಂಧಿಸಿದ ಎಲ್ಲಾ ಅಸ್ತಿಯ ಮಾಲೀಕರಿಗೆ ಪರಿಹಾರದ ಮೊತ್ತವನ್ನು ಪಾವತಿಸಲು ಪಾಲಿಕೆಯು 2017-18 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ **ಆಯುಕ್ತರ ದಿನಾಂಕ: 19-10-2017ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25-11-2017ರ ಸಭೆಯ ನಿರ್ಣಯ.**

**ನಿರ್ಣಯ: ಪ್ರಸ್ತಾಪಿತ ಕಾಮಗಾರಿಗೆ ವೆಚ್ಚವಾಗಿರುವ ಅನುದಾನವನ್ನು 2017-18ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಪಾವತಿಗೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***21]. ವಿಷಯದ ಸಂಖ್ಯೆ: ತೆಆಸ್ಥಾಸ/ 178 /2017-18***

ಆಯುಕ್ತರ ದಿ: 16-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್-94 ರ ಕೆಂಪೆಗೌಡ ರಸ್ತೆ (ವೃತ್ತ) ದಲ್ಲಿರುವ ಶ್ರೀ.ಸಂಕಷ್ಟಹರ ಗಣಪತಿ ದೇವಸ್ಥಾನ ಮತ್ತು ಈ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಪೂರ್ಣ ಪ್ರದೇಶದಲ್ಲಿ ವಿವಿಧ ದೇವರುಗಳ ಪೂಜಾಕಾರ್ಯ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಶ್ರೀ.ಸಂಕಷ್ಟಹರ ಗಣಪತಿ ದೇವಸ್ಥಾನ ಟ್ರಸ್ಟ್ ರವರು ಸಮಿತಿಯನ್ನು ಮಾಡಿಕೊಂಡು ನಿರ್ವಹಿಸುತ್ತಿರುವುದಾಗಿಯೂ ಸದರಿ ಸಮಿತಿಯಿಂದ ನಿರ್ವಹಣೆ ಮಾಡುತ್ತಿರುವ ದೇವಸ್ಥಾನಗಳಿರುವ ಈ ಪ್ರದೇಶವನ್ನು ಭೋಗ್ಯದ ಆಧಾರದ ಮೇಲೆ ಖಾತೆ ನೊಂದಾಯಿಸಿ ಕೊಡಲು ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ ಇವರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರು ನೀಡಿರುವ ಮನವಿ ಕುರಿತು ಪರಿಶೀಲಿಸಿ, ನಿಯಾಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿ ಇವರು ಪತ್ರ ಬರೆದಿರುತ್ತಾರೆ.

ದಿನಾಂಕ: 21/09/2011 ರಂದು ಸ್ಥಳೀಯ ಅಧಿಕಾರಿಗಳೊಂದಿಗೆ ಸಹಾಯಕ ಆಯುಕ್ತರು (ಆಸ್ತಿಗಳು) ರವರು ಸ್ಥಳ ಪರಿಶೀಲಿಸಲಾಗಿದೆ. ಕೆ.ಜಿ.ರಸ್ತೆ, ಕೆಂಪೆಗೌಡ ವೃತ್ತದ ಪ್ರದೇಶವಾಗಿದ್ದು, ಚೆಕ್ಕುಬಂದಿ ಈ ರೀತಿ ಇರುತ್ತದೆ. ಪೂರ್ವಕ್ಕೆ-ರಸ್ತೆ ಮತ್ತು ಡಾ॥.ರಾಜ್‌ಕುಮಾರ್ ರವರ ಪ್ರತಿಮೆ ಇರುವ ಸ್ಥಳ, ಪಶ್ಚಿಮಕ್ಕೆ-ರಸ್ತೆ ಮತ್ತು ಗೀತಾ ಕಾಂಪ್ಲೆಕ್ಸ್, ಉತ್ತರಕ್ಕೆ-ರಸ್ತೆ ಮತ್ತು ಪಾಲಿಕೆ ದ್ವಿಚಕ್ರ ವಾಹನ ನಿಲುಗಡೆ ಸ್ಥಳ ಹಾಗೂ ದಕ್ಷಿಣಕ್ಕೆ-ರಸ್ತೆ ಮತ್ತು ಸಂತೋಷ್ ಟಾಕೀಸ್ ಕಾಂಪ್ಲೆಕ್ಸ್ ಈ ಮಧ್ಯೆ ಇರುವ ಈ ಪ್ರದೇಶದ ವಿಸ್ತೀರ್ಣ ಪೂರ್ವ–ಪಶ್ಚಿಮ=26+57/2 * 67+56/2 = 2552 ಚದರ ಅಡಿ ವಿಸ್ತೀರ್ಣವುಳ್ಳದ್ದಾಗಿರುತ್ತದೆ.

ಶ್ರೀ.ಸಂಕಷ್ಟಹರ ಗಣಪತಿ ದೇವಸ್ಥಾನದ ಹಿಂಭಾಗದಲ್ಲಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ 6'*20' ಅಡಿ ವಿಸ್ತೀರ್ಣದ ಜಾಗದಲ್ಲಿ ಸಂಘದ ಕಾರ್ಯ ಚಟುವಟಿಕೆಗಳಿಗಾಗಿ ಒಂದು ಕೊಠಡಿ ನಿರ್ಮಿಸಿಕೊಂಡಿರುತ್ತಾರೆ. ಈ ಪ್ರದೇಶದಲ್ಲಿರುವ ಎಲ್ಲಾ ದೇವಸ್ಥಾನಗಳ ಪ್ರತಿನಿತ್ಯದ ಪೂಜಾ ಕಾರ್ಯಗಳಿಗೆ ಸಾರ್ವಜನಿಕರು ಬರುತ್ತಿದ್ದು, ಈ ಪ್ರದೇಶವನ್ನು ಟ್ರಸ್ಟ್ ಹೆಸರಿಗೆ ನೊಂದಾವಣೆ ಮಾಡಿಕೊಂಡಲು ನೂರಾರು ಭಕ್ತರು 16–ಪುಟಗಳಲ್ಲಿ ಸಹಿ ಸಂ ಗ್ರಹಿಸಿ ಅರ್ಜಿಯೊಂದಿಗೆ ಲಗತ್ತಿಸಿರುತ್ತಾರೆ. ಈ ಸ್ವತ್ತಿನ ಸುತ್ತಲೂ 4–ಭಾಗಗಳಲ್ಲಿ ವಾಹನಗಳ ಓಡಾಟಕ್ಕೆ ಸುರಕ್ಷಿತ ರಸ್ತೆಗಳಿರುವುದರಿಂದ, ಸದರಿ ಸಂಸ್ಥೆಗೆ ರಸ್ತೆ ಅಗಲೀಕರಣಕ್ಕೆ ಸ್ಥಳದ ಅವಶ್ಯಕತೆ ಬಂದಾಗ ತೆರವುಗೊಳಿಸುವ ಷರತ್ತಿಗೊಳಪಡಿಸಿ ಗುತ್ತಿಗೆಗೆ ನೀಡಬಹುದೆಂದು ತಮ್ಮ ಸ್ಥಳ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 26+57/2 * 67+56/2 =2552 ಬದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:13/04/2014–15 ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.17,710/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 17710*2552=4,51,95,920/– ರೂ.ಒಟ್ಟು ಮೊತ್ತಗಲಾಲಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತತ್ ರೂ,45,19,592/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.3,76,632/– ದಿನಾಂಕ:1/4/2016 ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.23922.22/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 23922*2552=6,10,49,505/– ರೂ.ಒಟ್ಟು ಮೊತ್ತಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.61,04,951/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.508745/– ದಿನಾಂಕ: 01/04/2017ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.23922.22/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 23922*2552=6,10,49,505/– ರೂ.ಒಟ್ಟು ಮೊತ್ತಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ, 61,04,951/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.508745/–ದಿನಾಂಕ:01–03–2002 ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಿಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನಲೆಯಲ್ಲಿ ಅಧ್ಯಕ್ಷರು, ಶ್ರೀ.ಸಂಕಷ್ಟಹರ ಗಣಪತಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್, ರವರಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಆಯುಕ್ತರ ದಿನಾಂಕ: 16.10.2017ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25.11.2017ರ ಸಭೆಯ ನಿರ್ಣಯ.**

**ನಿರ್ಣಯ: ಸರ್ಕಾರದ ಮಾರ್ಗಸೂಚಿ ಅನ್ವಯ ಹಾಲಿ ಮಾರುಕಟ್ಟೆ ದರವನ್ನು ನಿಯಮಾನುಸಾರ ನಿಗಧಿಪಡಿಸಿಕೊಂಡು 3 (ಮೂರು) ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## *22]. ವಿಷಯದ ಸಂಖ್ಯೆ: ತೆಆಸ್ಥಾಸ/ 179 /2017-18*

ಪ್ರಧಾನ ಅಭಿಯಂತರರರ ದಿನಾಂಕ: 30-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವ್ಯಾಪ್ತಿಯನ್ನು ಪೂರ್ವ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹದೇವಪುರ, ಯಲಹಂಕ ಬೊಮ್ಮನಹಳ್ಳಿ ವಲಯಗಳಾಗಿ ವಿಂಗಡಿಸಿದ್ದು ಎಲ್ಲಾ ವಲಯಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಮತ್ತು ಕೆಟ್ಟಿರುವ ದೀಪಗಳನ್ನು ಪುನಃ ಅಳವಡಿಸಲು 2017-18ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0300ರ ಅಡಿಯಲ್ಲಿ ಒಟ್ಟು ಮೊತ್ತ ರೂ.2000.00 ಲಕ್ಷಗಳ ಮೊತ್ತವನ್ನು ಅನುವು ಮಾಡಲಾಗಿರುತ್ತದೆ.

ಪಾಲಿಕೆಯ 08 ವಲಯದ ವಿದ್ಯುತ್ ಶಾಖೆಯ ಅಭಿಯಂತರರು ಕಂಡಿಕೆ (21) ರಿಂದ (50) ರವರೆಗೆ ನೀಡಿರುವ ವರದಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| **ಕ್ರಮ ಸಂಖ್ಯೆ** | **ವಲಯ** | **ಮೊತ್ತ ರೂ. ಲಕ್ಷಗಳಲ್ಲಿ** |
|---|---|---|
| 1. | ಪೂರ್ವ | 1199.51 |
| 2. | ಪಶ್ಚಿಮ | 827.50 |
| 3. | ದಕ್ಷಿಣ | 1339.05 |
| 4. | ಬೊಮ್ಮನಹಳ್ಳಿ | 650.00 |
| 5. | ಮಹದೇವಪುರ | 640.00 |
| 6. | ಯಲಹಂಕ | 454.00 |
| 7. | ದಾಸರಹಳ್ಳಿ | 218.00 |
| 8. | ರಾಜರಾಜೇಶ್ವರಿನಗರ | 600.00 |
| | **ಒಟ್ಟು ಮೊತ್ತ ರೂ.** | **5928.06** |

ಪಾಲಿಕೆಯ 08 ವಲಯದ ಬೀದಿ ದೀಪದ ನಿರ್ವಹಣೆ ಕಾರ್ಯಗಳಿಗೆ ಒಟ್ಟು ಮೊತ್ತ ರೂ.5928.06 ಲಕ್ಷಗಳು ಅಗತ್ಯವಿರುತ್ತದೆ ಎಂದು ವಲಯ ವಿದ್ಯುತ್ ಅಬಿಯಂತರರು ವರದಿಯನ್ನು ಸಲ್ಲಿಸಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (16) ರಲ್ಲಿ ಸದರಿ ಕಾರ್ಯಕ್ಕೆ 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0300ರ ಅಡಿಯಲ್ಲಿ ರೂ.2000.00 ಲಕ್ಷಗಳ ಮೊತ್ತವು ಅನುವು ಮಾಡಲಾಗಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ–0300 (M&R to street lights replacement of burnt bulbs, etc) ರ ಅಡಿಯಲ್ಲಿ ರೂ.3928.01 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017–18ನೇ ಸಾಲಿನ ಆಯವ್ಯಯದಲ್ಲಿ ಪಿ–0300ರಲ್ಲಿ ನಿಗದಿಪಡಿಸಿರುವ ಅನುದಾನವು 8 ವಲಯಗಳಿಗೆ ಸಂಬಂದಿಸಿದ್ದು, ಕೇವಲ 2 ವಲಯಕ್ಕೆ ಮಾತ್ರ ಸಿಮಿತಗೊಳಿಸಿ ಟೆಂಡರ್ ಕರೆದಿರುವುದನ್ನು ರದ್ದುಪಡಿಸಿ, ಸದರಿ ಮೊತ್ತವನ್ನು ಪ್ರಸ್ತುತ ಆರ್ಥಿಕ ವರ್ಷದವರೆಗೆ ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಹಾಲಿ ಚಾಲ್ತಿಯಲ್ಲಿರುವ ಪದ್ದತಿಯ ಅಡಿಯಲ್ಲಿ ಬಿಲ್ ಪಾವತಿಸುವುದು.**

**ಸಂಪೂರ್ಣ ಬೆಂಗಳೂರು ನಗರಕ್ಕೆ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯು ಅನುಷ್ಠಾನಗೊಳ್ಳುವವರೆವಿಗೂ ಒಟ್ಟಾರೆ 8 ವಲಯಗಳಿಗೆ ಟೆಂಡರ್‌ಗೆ ಅವಶ್ಯವಿರುವ ಒಟ್ಟು ಮೊತ್ತವನ್ನು 2018–19ನೇ ಆಯವ್ಯಯದಲ್ಲಿ ನಿಗದಿಪಡಿಸಿಕೊಂಡು ಟೆಂಡರ್ ಕರೆಯಲು ಕ್ರಮವಹಿಸುವುದೆಂದು ಅಲ್ಲಿಯವರೆವಿಗೂ ಹಾಲಿ ಪದ್ದತಿಯನ್ನು ಮುಂದುವರೆಸಲು ಸಮಿತಿಯು ತೀರ್ಮಾನಿಸಿತು.**

***23]. ವಿಷಯದ ಸಂಖ್ಯೆ: ತೆಆಸ್ಥಾಸ/ 180 /2017–18***

ಪ್ರಧಾನ ಅಭಿಯಂತರರರ ದಿನಾಂಕ: 30–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಕಂಡಿಕೆ (05) ರಲ್ಲಿ ಕಾಮಗಾರಿಯಾದ Providing man power wupply to the Dasarahalli zonal control room ಗೆ ಒಂದು ವರ್ಷ ಅವಧಿಗೆ ಹಾಲಿ ಇರುವ Labour Department minium wages Act ಪ್ರಕಾರ ದರಗಳನ್ನು ಅಳವಡಿಸಿ ಅಗತ್ಯವಿರುವ man power ಗಳಿಗೆ ಅಂದಾಜು ಪಟ್ಟಿಯನ್ನು ರೂ.28.00 ಲಕ್ಷಗಳಿಗೆ ತಯಾರಿಸಿದ್ದು ಲೆಕ್ಕಶೀರ್ಷಿಕೆ–3156ರ ಅಡಿ ಜಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಈ ವಿಚಾರದಲ್ಲಿ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿರವರು ಕಂಡಿಕೆ (11) ರಲ್ಲಿ 2017–18ನೇ ಸಾಲಿನ ಆಯವ್ಯಯದ ಲೆಕ್ಕಶೀಷಿಕೆ–3156ರ ಅಡಿಯಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.28.00 ಲಕ್ಷಗಳಿಗೆ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ–3156 (Maintenance of control rooms in all zones) ರ ಅಡಿಯಲ್ಲಿ ರೂ.28.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

***24]. ವಿಷಯದ ಸಂಖ್ಯೆ: ತೆಆಸ್ಥಾಸ/ 181 /2017–18***

ಪ್ರಧಾನ ಅಭಿಯಂತರರರ ದಿನಾಂಕ: 30–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್–108 ವ್ಯಾಪ್ತಿಯಲ್ಲಿ ಕಾಮಗಾರಿಯಾದ Providing tools, plants, machinery and man power for demolition of deviated protions of the building constructed at site no 87 (old no 113) 3rd main road 4th block Rajajinagara-ಗೆ ಈಗಾಗಲೇ ವಲಯದ ಅಧಿಕಾರಿಗಳು ಕೆ.ಎಂ.ಸಿ. ಕಾಯ್ದೆ 1976 ಪ್ರಕಾರ ಕಲಂ 321(1), 321(2)ರ ಅನ್ವಯ ಹೊರಡಿಸಿರುವ ನೋಟೀಸ್ ಸಂಖ್ಯೆ: 3/15–16, ದಿ:29–04–2015 ಮತ್ತು ಸೆಕ್ಷನ್ 321(3)ರ ಪ್ರಕಾರ ಹೊರಡಿಸಿರುವ ಸ್ಥಿರೀಕರಣ ಆದೇಶ ಸಂಖ್ಯೆ:3/15–16, ದಿ:11–05–2015ರಲ್ಲಿ ನೀಡಲಾಗಿರುತ್ತದೆ. ನಂತರ ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) ರವರು ಸೆಕ್ಷನ್ 462ರ ಅಡಿ ಕಾರ್ಯಕಾರಿ ಆದೇಶ ಸಂಖ್ಯೆ:7/16–17, ದಿ:17–02–2017 ರಂದು ಜಾರಿ ಮಾಡಿದ್ದು, ಸದರಿ ಸ್ವತ್ತಿನಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು 2016–17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳನ್ನು ಅಳವಡಿಸಿ ರೂ.548766.00 ಗಳಿಗೆ ತಯಾರಿಸಿದ್ದು, ಲೆಕ್ಕಶೀರ್ಷಿಕೆ–0055ರ ಅಡಿಯಲ್ಲಿ ಜಾಬ್‌ಸಂಖ್ಯೆಯನ್ನು ನೀಡಲು ವರದಿ ಸಲ್ಲಿಸಿರುತ್ತಾರೆ. ಮುಖ್ಯ ಆರ್ಥಿಕ ಲೆಕ್ಕಾಧಿಕಾರಿರವರು ಕಂಡಿಕೆ (10) ರಲ್ಲಿ 2017–18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ–0055ರ ಅಡಿಯಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.548766.00 ಲಕ್ಷಗಳಿಗೆ ಅಗತ್ಯವಿರುವ ಮೊತ್ತವು ಕೊರತೆ ಇರುವುದಾಗಿ ಹಾಗೂ ಸಮಿತಿಯ ಮುಂದೆ ಮಂಡಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ–0055 (Encroachment clearance express **(Demolition charges)** ರ ಅಡಿಯಲ್ಲಿ ರೂ.548766.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

***25]. ವಿಷಯದ ಸಂಖ್ಯೆ: ತೆಆಸ್ಥಾಸ/ 182 /2017–18***

ಆಯುಕ್ತರ ದಿನಾಂಕ: 18–11–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ದೊಡ್ಡಮ್ಮದೇವಿ ಉತ್ಸವ ಸಮಿತಿ (ರಿ), ನಂ.51/3, 6ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು–560010, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–03ರಲ್ಲಿ ಕ್ರಮ ಸಂಖ್ಯೆ: 53ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಶ್ರೀ ದೊಡ್ಡಮ್ಮದೇವಿ ಉತ್ಸವ ಸಮಿತಿ (ರಿ) ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಅನುಮೋದಿತ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಮಿತಿಯ ಕಾಯಚಟುವಟಿಕೆಗಳಿಗಾಗಿ 2017–18ನೇ ಸಾಲಿಗೆ ಹಂಚಿಕೆ ಮಾಡಲಾಗಿರುವ ಸಹಾಯಧನವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.**

***26]. ವಿಷಯದ ಸಂಖ್ಯೆ: ತೆಆಸ್ಥಾಸ/ 183 /2017-18***

ಆಯುಕ್ತರ ದಿನಾಂಕ: 01-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಯಂ ಪೌರಕಾರ್ಮಿಕರಿಗೆ ಬಿಡಿಎ ವತಿಯಿಂದ ನಿರ್ಮಿಸಿರುವ ವಸತಿಗೃಹಗಳನ್ನು ರೂ.9.00 ಲಕ್ಷಕ್ಕೆ ಒಂದರಂತೆ ಖರೀದಿಸಿ ಸರ್ಕಾರಿ ಆದೇಶ ಸಂಖ್ಯೆ: ನಅಇ/528/ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ: 19-12-2016 ರಂತೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರ್ಹ ಖಾಯಂ ಪೌರಕಾರ್ಮಿಕರಿಗೆ "ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ" ಸರ್ಕಾರವು ನೀಡುವ ಸಹಾಯಧನ ಮೊತ್ತ ರೂ.6.00 ಲಕ್ಷಗಳೊಂದಿಗೆ ಹೆಚ್ಚುವರಿಯಾಗುವ ಮೊತ್ತವನ್ನು "ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆ" ಯ ಮಾರ್ಗಸೂಚಿಯ ಅನುಸಾರ ಫಲಾನುಭವಿಗಳಿಂದ ಮತ್ತು ಮೇಲ್ಕಂಡ ವಸತಿ ಗೃಹಗಳಿಗೆ ಅಗತ್ಯ ಮೂಲಸೌಕರ್ಯಗಳಿಗೆ ನೀಡಬೇಕಾದ ಮೊತ್ತವನ್ನು ಫಲಾನುಭವಿಗಳಿಂದ ಅಥವಾ ಬಿಬಿಎಂಪಿ ವತಿಯಿಂದ ಪಾವತಿಸುವ ಷರತ್ತಿಗೊಳ್ಳಪಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನಿರ್ಮಿಸಿರುವ ವಸತಿ ಗೃಹಗಳಲ್ಲಿ ಆರ್ಥಿಕ ದುರ್ಬಲ ವರ್ಗದಡಿ ಹಂಚಿಕೆಗೆ ಲಭ್ಯವಿರುವ ವಸತಿ ಘಟಕಗಳನ್ನು ಖರೀದಿಸಿ, ಬಿಬಿಎಂಪಿಯ ಖಾಯಂ ಪೌರಕಾರ್ಮಿಕರಿಗೆ ಹಂಚಿಕೆ ಮಾಡಲು ಅನುಮೋದನೆ ನೀಡಿದೆ.

ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರ ಪತ್ರದ ಸಂಖ್ಯೆ: 14246 ಡಿಎಂಎ 39 ಡಿಇವಿಟಿ 2015-16 ದಿನಾಂಕ: 07-06-2017 ರಂತೆ ಈಗಾಗಲೇ ಎಲ್ಲಾ ವಸತಿ ಗೃಹಗಳ ಕಾಮಗಾರಿಗಳು ಮುಕ್ತಾಯಗೊಂಡು ಪೌರಕಾರ್ಮಿಕರಿಗೆ ಹಸ್ತಾಂತರಿಸಲು ಸಿದ್ಧವಾಗಿದ್ದು, ಮೊದಲನೇಯ ಹಂತವಾಗಿ 162 ವಸತಿ ಗೃಹಗಳನ್ನು ಹಸ್ತಾಂತರಿಸಲು ಅನುವಾಗುವಂತೆ ಪ್ರಸ್ತುತ ಸಲ್ಲಿಸಿರುವ 162 ಫಲಾನುಭವಿಗಳ, ಪೌರಕಾರ್ಮಿಕರ/ಬಿಬಿಎಂಪಿ ಪಾಲಿನ ಒಟ್ಟು ಮೊತ್ತ ರೂ 486-00 ಲಕ್ಷಗಳನ್ನು ಶೀಘ್ರವಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಬಿಡುಗಡೆ ಮಾಡಲು ಕೋರಿರುವ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಕಛೇರಿ ಆದೇಶದಲ್ಲಿ ತಿಳಿಸಿರುವಂತೆ ಜಂಟಿ ಆಯುಕ್ತರು (ದಕ್ಷಿಣ) ವಲಯದಿಂದ 95 ಮಂದಿ ಖಾಯಂ ಪೌರಕಾರ್ಮಿಕರು, ಜಂಟಿ ಆಯುಕ್ತರು (ಪಶ್ಚಿಮ) ವಲಯದಿಂದ 26 ಮಂದಿ ಖಾಯಂ ಪೌರಕಾರ್ಮಿಕರು ಹಾಗೂ ಜಂಟಿ ಆಯುಕ್ತರು (ಪೂರ್ವ) ವಲಯದಿಂದ 41 ಮಂದಿ ಖಾಯಂ ಪೌರಕಾರ್ಮಿಕರ ಒಟ್ಟು 162 ಮಂದಿ ಖಾಯಂ ಪೌರಕಾರ್ಮಿಕರಿಗೆ ಬಿ.ಬಿ.ಎಂ.ಪಿ ಪಾಲಿನ ಮೊತ್ತ ರೂ.486-00 ಲಕ್ಷಗಳನ್ನು ಶೀಘ್ರವಾಗಿ ನಿರ್ದೇಶನಾಲಯಕ್ಕೆ ಬಿಡುಗಡೆಗೊಳಿಸುವಂತೆ ಮಾನ್ಯ ಆಯುಕ್ತರವರ ಕಛೇರಿ ಆದೇಶದಲ್ಲಿ ಸಂಬಂಧಿಸಿದ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿರುತ್ತದೆ.

ಮುಂದುವರೆದು ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ಖಾಯಂ ಪೌರಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸುವ ಸಂಬಂಧ ಎರಡನೇ ಹಂತದಲ್ಲಿ ಜಂಟಿ ಆಯುಕ್ತರು (ಪೂರ್ವ) ವಲಯದಿಂದ 24 ಮಂದಿ ಖಾಯಂ ಪೌರಕಾರ್ಮಿಕರ ಹಾಗೂ ಜಂಟಿ ಆಯುಕ್ತರು (ಪಶ್ಚಿಮ) ವಲಯದಿಂದ 54 ಮಂದಿ ಖಾಯಂ ಪೌರಕಾರ್ಮಿಕರ ಪಟ್ಟಿಯನ್ನು ಪರಿಶೀಲಿಸಿ, ನಿಗಧಿತ ನಮೂನೆಯಲ್ಲಿ 88 ಫಲಾನುಭವಿಗಳ ಪಟ್ಟಿಯನ್ನು ದೃಢೀಕರಿಸಿ ನಿರ್ದೇಶಕರು ಪೌರಾಡಳಿತ ಇಲಾಖೆ ರವರಿಗೆ ಪಾಲಿಕೆಯ ಆಡಳಿತ ವಿಭಾಗದ ಮೂಖೇನ ವಿಶೇಷ ಆಯುಕ್ತರು(ಆಡಳಿತ) ರವರು ಅನುಮೋದಿಸಿ ಪತ್ರದ ಮುಖೇನ ದಿನಾಂಕ: 04.11.2017 ರಂದು ಸಲ್ಲಿಸಿರುತ್ತಾರೆ. ಎರಡನೇ ಹಂತದಲ್ಲಿ ಒಟ್ಟು 88 ವಸತಿ ಗೃಹಗಳನ್ನು ಪ್ರತಿ ಅರ್ಹ ಫಲಾನುಭವಿಗಳಿಗೆ ರೂ.3.00 ಲಕ್ಷಗಳಂತೆ ಹಸ್ತಾಂತರಿಸಲು ಪಾಲಿಕೆಯ ವತಿಯಿಂದ ಒಟ್ಟು 264.00 ಲಕ್ಷಗಳನ್ನು ಮಂಜೂರು ಮಾಡಲು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಶೇ.24.10% ರಲ್ಲಿ ಪಿ-ಕೋಡ್: 2021ರ SCP/TSP ಅನುದಾನದಿಂದ ಹಾಗೂ ಹಿಂದಳಿದ ವರ್ಗಗಳ ಫಲಾನುಭವಿಗಳಿಗೆ ಪಿ-ಕೋಡ್: 2340ರ ಅನುದಾನದಿಂದ ಭರಿಸುವ ಪ್ರಸ್ತಾವನೆಯನ್ನು ಆಡಳಿತ ವಿಭಾಗವು ಮಂಡಿಸಿರುತ್ತದೆ.

ಸದರಿ ವಸತಿ ಸೌಲಭ್ಯಗಳ ಲೆಕ್ಕ ಶೀರ್ಷಿಕೆ ಪಿ–ಕೋಡ್: 2021 ಮತ್ತು ಪಿ–ಕೋಡ್: 2340ರ ಸಹಾಯಧನಕ್ಕೆ ಸಂಬಂಧಪಟ್ಟ ಯೋಜನೆಗಳಿಗೆ ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಿಯಂತರರು, ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ವರ್ಗವಾರು ಪ್ರಸ್ತಾವನೆಗಳನ್ನು ಒಳಗೊಂಡ ವಾರ್ಡ್ / ಉಪ ವಿಭಾಗ / ವಿಭಾಗೀಯ / ವಲಯವಾರು ಕಾಮಗಾರಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಮುಚ್ಛಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮಕೈಗೊಂಡು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಯೋಜನೆ'ಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಹಾಲಿ ಪ್ರಸ್ತಾವನೆಯನ್ನು ಪಾಲಿಕೆಯ ಆಡಳಿತ ವಿಭಾಗವು ಪಿ–ಕೋಡ್:2021ರ SCP/TSP ಅನುದಾನದಿಂದ ಹಾಗೂ ಹಿಂದಳಿದ ವರ್ಗಗಳ ಫಲಾನುಭವಿಗಳಿಗೆ ಪಿ–ಕೋಡ್:2340 ಅನುದಾನದಿಂದ ಭರಿಸಲು ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಖಾಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ವಿಶೇಷ ಆಯುಕ್ತರು (ಕಲ್ಯಾಣ) ರವರ ಮುಖೇನ ಮಂಡಿಸಲು ಕಡತನ್ನು ಸಲ್ಲಿಸಿದ್ದು, ಸದರಿ ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಖಾಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ದಿನಾಂಕ: 01.12.2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 16.12.2017ರ ನಿರ್ಣಯ.

**ನಿರ್ಣಯ: ಪ್ರಸ್ತಾಪಿತ ವಿಷಯದಲ್ಲಿ 2017–18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ–3313ರಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ವೆಚ್ಚಗಳನ್ನು ಭರಿಸಬಹುದೆಂದು ಸಮಿತಿಯು ತೀರ್ಮಾನಿಸಿತು.**

***27]. ವಿಷಯದ ಸಂಖ್ಯೆ: ತೆಆಸ್ಥಾಸ/ 184 /2017–18***

ಪ್ರಧಾನ ಅಭಿಯಂತರರರ ದಿನಾಂಕ: 18–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2017–18ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3316, ಪುಟ ಸಂಖ್ಯೆ: 107ರಲ್ಲಿ ಒಟ್ಟು ಮೊತ್ತ ರೂ.8500.00 ಲಕ್ಷಗಳ ಅನುದಾನವನ್ನು ಒಟ್ಟು 10 ವಾರ್ಡ್‌ಗಳಾದ 82, 6, 16, 44, 70, 17, 26, 13, 79 ಮತ್ತು 35 ಗಳಿಗೆ ಮೀಸಲಿರಿಸಿದ್ದು ಇದರಂತೆ ತಲಾ ಒಂದು ವಾರ್ಡ್‌ಗೆ ರೂ.850.00 ಲಕ್ಷಗಳನ್ನು ಅನುವು ಮಾಡಬೇಕಾಗಿರುತ್ತದೆ. ಈ ವಿಚಾರದಲ್ಲಿ ಪಾಲಿಕೆಯ ವಾರ್ಡ್ 17ರ ಸದಸ್ಯರು ಪತ್ರ ದಿ: 23–11–2017 ರಂತೆ ವಾರ್ಡ್ 13ಕ್ಕೆ ವಿಶೇಷ ಅಭಿವೃದ್ಧಿ ಕಾಮಗಾರಿಗೆ ರೂ.450.00 ಲಕ್ಷಗಳನ್ನು ಅನುವು ಮಾಡಲು ಹಾಗೂ ಮರುಹಂಚಿಕೆ ಮಾಡಿ ಜಾಬ್ ಸಂಖ್ಯೆಯನ್ನು ನೀಡುವಂತೆ ಕೋರಿರುತ್ತಾರೆ. ವಾರ್ಡ್ 13ಕ್ಕೆ ಸಂಬಂಧಪಟ್ಟಂತೆ ಅನುದಾನ ರೂ.450.0 ಲಕ್ಷಗಳಿಗೆ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| Sl No | Name Of Work | Est Cost (Rs. In Lakhs) |
|---|---|---|
| 01 | Improvemnets Footpath and Kerb at Shettyahalli Sub Division Office Road In Mallasandra w-13 | 50.00 |
| 02 | Improvements Of Road From Mallikarjuna Swamy Temple to Dobhighat Sy No.33 in Mallasandra Park W-13 | 100.00 |
| 03 | Improvements Of Road From Dobhighat to Anjaneya swamy Temple Back Road Sy No.33 in Mallasandra Park W No-13 | 100.00 |

| | | |
|---|---|---|
| 04 | Improvements Of Footpath and Kerb From Mallikarjuna Swamy Temple to Benkimuneshwara Temple at Sy No.33 in Mallasandra Park W No-13 | 50.00 |
| 05 | Improvements Of CC Road and RCC Drain in Mallasandra Park Road in W-13 | 50.00 |
| 06 | Construction U Shape Drain For Secondary SWD In Mallasandra W No-13 | 100.00 |
| | **Total:** | **450.00** |

ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ 2016–17ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಕಂಡಿಕೆ (06)ರಲ್ಲಿ ಸದರಿ 06 ಕಾಮಗಾರಿಗಳಿಗೆ ಜಾಬ್ ಕೋಡ್‌ಗಳನ್ನು ಪಿ–3316 ರಲ್ಲಿ ಅನುವು ಮಾಡಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (10) ರಲ್ಲಿ ಸದರಿ ಪ್ರಸ್ತಾವನೆಗೆ ಮರುಹಂಚಿಕೆ ಮಾಡಿ ಜಾಬ್‌ಕೊಡ್ ನೀಡಲು ಆದೇಶ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ ಲೆಕ್ಕಶೀರ್ಷಿಕೆ ಪಿ–3316ರಲ್ಲಿ ವಾರ್ಡ್ ಸಂಖ್ಯೆ: 17ರ ಮೊತ್ತವು ರೂ.850.00 ಲಕ್ಷಗಳಲ್ಲಿರುವ ಮೊತ್ತದಲ್ಲಿ ವಾರ್ಡ್ ಸಂಖ್ಯೆ: 13ಕ್ಕೆ ಪ್ರಸ್ತಾವನೆಯಾಗಿರುವ 06 ಕೆಲಸಗಳಿಗೆ ಒಟ್ಟು ಮೊತ್ತ ರೂ.450.00 ಲಕ್ಷಗಳ ಅನುದಾನ ಮರುಹಂಚಿಕೆ ಮಾಡಿ ಜಾಬ್‌ಕೋಡ್ ನೀಡುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 18–12–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***28]. ವಿಷಯದ ಸಂಖ್ಯೆ: ತೆಆಸ್ಥಾಸ/ 185 /2017–18***

ಪ್ರಧಾನ ಅಭಿಯಂತರರರ ದಿನಾಂಕ: 18–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2017–18ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3316, ಪುಟ ಸಂಖ್ಯೆ: 107ರಲ್ಲಿ ಒಟ್ಟು ಮೊತ್ತ ರೂ.8500.00 ಲಕ್ಷಗಳ ಅನುದಾನವನ್ನು ಒಟ್ಟು 10 ವಾರ್ಡ್‌ಗಳಾದ 82, 6, 16, 44, 70, 17, 26, 13, 79 ಮತ್ತು 35 ಗಳಿಗೆ ಮೀಸಲಿರಿಸಿದ್ದು ಇದರಂತೆ ತಲಾ ಒಂದು ವಾರ್ಡ್‌ಗೆ ರೂ.850.00 ಲಕ್ಷಗಳನ್ನು ಅನುವು ಮಾಡಬೇಕಾಗಿರುತ್ತದೆ. ಈ ವಿಚಾರದಲ್ಲಿ ಪಾಲಿಕೆಯ ವಾರ್ಡ್ 17ರ ಸದಸ್ಯರು ಪತ್ರ ದಿ: 23–11–2017 ರಂತೆ ವಾರ್ಡ್ 71ಕ್ಕೆ ವಿಶೇಷ ಅಭಿವೃದ್ಧಿ ಕಾಮಗಾರಿಗೆ ರೂ.200.00 ಲಕ್ಷಗಳನ್ನು ಅನುವು ಮಾಡಲು ಹಾಗೂ ಮರುಹಂಚಿಕೆ ಮಾಡಿ ಜಾಬ್ ಸಂಖ್ಯೆಯನ್ನು ನೀಡುವಂತೆ ಕೋರಿರುತ್ತಾರೆ. ವಾರ್ಡ್ 71ಕ್ಕೆ ಸಂಬಂಧಪಟ್ಟಂತೆ ಅನುದಾನ ರೂ.200.0 ಲಕ್ಷಗಳಿಗೆ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| Sl No | Name Of Work | Est Cost (Rs. In Lakhs) |
|---|---|---|
| 01 | Asphalting to roads at Srigandhanagara & Gajanna nagara in ward No.71 | 50.00 |
| 02 | Asphalting to roads at Sanjeevini nagara 1st stage in ward No.71 | 50.00 |
| 03 | Asphalting to roads at Sanjeevini nagara 2nd stage in ward No.71 | 50.00 |
| 04 | Asphalting to roads at Hoysala nagara Sunkadakatte in ward No.71 | 50.00 |
| | **Total:** | **200.00** |

ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ 2016–17ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಕಂಡಿಕೆ (13)ರಲ್ಲಿ ಸದರಿ 04 ಕಾಮಗಾರಿಗಳಿಗೆ ಜಾಬ್ ಕೋಡ್‌ಗಳನ್ನು ಪಿ–3316 ರಲ್ಲಿ ಅನುವು ಮಾಡಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (18) ರಲ್ಲಿ ಸದರಿ ಪ್ರಸ್ತಾವನೆಗೆ ಮರುಹಂಚಿಕೆ ಮಾಡಿ ಜಾಬ್‌ಕೊಡ್ ನೀಡಲು ಆದೇಶ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ ಲೆಕ್ಕಶೀರ್ಷಿಕೆ ಪಿ–3316ರಲ್ಲಿ ವಾರ್ಡ್ ಸಂಖ್ಯೆ: 17ರ ಮೊತ್ತವು ರೂ.850.00 ಲಕ್ಷಗಳಲ್ಲಿರುವ ಮೊತ್ತದಲ್ಲಿ ವಾರ್ಡ್ ಸಂಖ್ಯೆ: 71ಕ್ಕೆ ಪ್ರಸ್ತಾವನೆಯಾಗಿರುವ 04 ಕೆಲಸಗಳಿಗೆ ಒಟ್ಟು ಮೊತ್ತ ರೂ.200.00 ಲಕ್ಷಗಳ ಅನುದಾನ ಮರುಹಂಚಿಕೆ ಮಾಡಿ ಜಾಬ್‌ಕೋಡ್ ನೀಡುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 18–12–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು (ADDITIONAL SUBJECTS)

### *29]. ವಿಷಯದ ಸಂಖ್ಯೆ: ತೆಆಸ್ಥಾಸ/ 192 /2017–18*

ಆಯುಕ್ತರ ದಿನಾಂಕ: 26–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್–145, ಹೊಂಬೇಗೌಡನಗರದಲ್ಲಿ ಬರುವ ಲಕ್ಕಸಂದ್ರ ಕ್ವಾರಿಫಿಟ್ 60x95 ಮೀಟರ್ ಅಳತೆಯ ಪಾಲಿಕೆ ಜಾಗದಲ್ಲಿ ಈ ಹಿಂದೆ ಈಜುಕೊಳವನ್ನು ನಿರ್ಮಿಸಲು ಕಾಮಗಾರಿ ಆರಂಭಿಸಿದ್ದು, ಕಾಮಗಾರಿಯು ಅಪೂರ್ಣಗೊಂಡು ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಈ ಸ್ಥಳದ ಪಕ್ಕದಲ್ಲಿ ಕೊಳಚೆ ಪ್ರದೇಶವಿದ್ದು ಅಲ್ಲಿನ ಜನರು ಈ ಈಜುಕೊಳವನ್ನು ಕಾನೂನು ಬಾಹಿರ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದು, ಈಗಾಗಲೇ ಹಾಕಲಾಗಿರುವ ಟೈಲ್ಸ್‌ಗಳನ್ನು ಕಿತ್ತು ಹಾಕಿರುವುದಲ್ಲದೇ ಸೂಕ್ತ ನಿರ್ವಹಣೆಯಿಲ್ಲದೇ ಅನಾನುಕೂಲ ಪರಿಸ್ಥಿತಿಯಲ್ಲಿರುತ್ತದೆ ಎಂದು ಪಾಲಿಕೆ ಸದಸ್ಯರು ಹಾಗೂ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ.ಡಿ.ಚಂದ್ರಪ್ಪ ರವರು ಪತ್ರದ ಮುಖಾಂತರ ತಿಳಿಸಿರುತ್ತಾರೆ. ಸದರಿ ಈಜುಕೊಳವನ್ನು 3 ವರ್ಷಗಳ ಅವಧಿಗೆ M/S RAY CENTER ಸಂಸ್ಥೆಯವರಿಗೆ ಗುತ್ತಿಗೆಗೆ ನೀಡಲು ಕೋರಿರುತ್ತಾರೆ. ಹಾಲಿ ಈಜುಕೊಳದ ಕಾಮಗಾರಿ ಸ್ಥಗಿತಗೊಂಡಿರುವ ಫೋಟೋಗಳನ್ನು ಕಡತದಲ್ಲಿ ಲಗತ್ತಿಸಿದೆ.

M/S RAY CENTER ನಂ:456, 1ನೇ ಮುಖ್ಯರಸ್ತೆ, ರಾಯಲ್ ಕೌಂಟಿ ಪೇಸ್–1, ಜೆ.ಪಿ.ನಗರ, 8ನೇ ಫೇಸ್, ಬೆಂಗಳೂರು–560083 ರವರು ದಿನಾಂಕ:04–01–2017 ರಂದು ಮಾನ್ಯ ಸದಸ್ಯರಿಗೆ ಪತ್ರ ಬರೆದು ತಮ್ಮ ಸ್ವಂತ ಖರ್ಚಿನಿಂದ ಸ್ಥಗಿತಗೊಂಡಿರುವ ಈಜುಕೊಳದ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಿರ್ವಹಣೆ ಮಾಡಲು 03 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಪ್ರಸ್ತುತ ಈಜುಕೊಳವು ದುರಸ್ಥಿಯಲ್ಲಿದ್ದು, ಈಜುಕೊಳವನ್ನು ದುರಸ್ಥಿ ಮಾಡಲು ಪಾಲಿಕೆ ವತಿಯಿಂದ ಅನುದಾನ ಲಭ್ಯತೆ ಇರುವುದಿಲ್ಲ. ಒಂದು ವೇಳೆ ಅನುದಾನ ದೊರೆತಿದ್ದಲ್ಲಿ ಟೆಂಡರ್ ಕರೆದು ಏಜೆನ್ಸಿರವರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು ತುಂಬಾ ವಿಳಂಬವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಅದರಂತೆ ಕಾನೂನು ಕೋಶದ ಮುಖ್ಯಸ್ಥರು ಸ್ಥಗಿತಗೊಂಡಿರುವ ಈಜುಕೊಳದ ಕಾಮಗಾರಿಯನ್ನು ದುರಸ್ಥಿಗೊಳಿಸಿ ನಿರ್ವಹಿಸಲು ಅನುದಾನ ಲಭ್ಯವಿಲ್ಲದೇ ಇರುವುದರಿಂದಲೂ ಒಂದು ವೇಳೆ ಅನುದಾನ ದೊರೆತಲ್ಲಿ ಟೆಂಡರ್ ಕರೆದು ಕಾಮಗಾರಿ ನೀಡಲು ತುಂಬಾ ವಿಳಂಬವಾಗುವುದಾಗಿ ತಿಳಿಸಿರುವುದರಿಂದ ಈಜುಕೊಳದ ದುರಸ್ಥಿ ಕಾರ್ಯಕ್ಕೆ ಅನುದಾನವು ಇಲ್ಲದೇ ಇರುವುದರಿಂದ ಟೆಂಡರ್ ಮುಖಾಂತರ ಕಾಮಗಾರಿಯನ್ನು ನಿರ್ವಹಿಸುವುದಾಗಲಿ ಅಥವಾ ಪಿ.ಪಿ.ಪಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಬರುವುದಿಲ್ಲವಾಗಿರುತ್ತದೆ.

ಆದ ಮೇರೆಗೆ ಪ್ರಸ್ತಾಪಿತ ವಿಷಯವನ್ನೊಳಗೊಂಡಂತೆ ಗುತ್ತಿಗೆಗೆ ನೀಡುವ ಬಗ್ಗೆ ಕೆಎಂಸಿ ಕಾಯ್ದೆ 1976 ಕಲಂ 176 ರಂತೆ ಟಿಪ್ಪಣಿ ತಯಾರಿಸಿ ಮಾನ್ಯ ಆಯುಕ್ತರ ರವರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಬಹುದಾಗಿ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುತ್ತಾರೆ.

ಅದರಂತೆ, ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು ಸದರಿ ಜಾಗವನ್ನು ಗುತ್ತಿಗೆಗೆ ನೀಡುವ ಬಗ್ಗೆ ಟಿಪ್ಪಣಿ ತಯಾರಿಸಲು ಕೋರಿರುವ ಮೇರೆಗೆ ಹಾಗೂ ಸದರಿ ಸ್ವತ್ತಿನ ಸ್ಥಳವನ್ನು ಪರಿಶೀಲಿಸಿ ಅಳತೆ ಮಾಡಿ ನಕ್ಷೆಯೊಂದಿಗೆ ಚಕ್ಕುಬಂದಿ ಮತ್ತು ಅಳತೆಯನ್ನು ನಮೂದಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಾರ್ಡ್ ನಂ: 145ರ ಹೊಂಬೇಗೌಡನಗರ, ಲಕ್ಕಸಂದ್ರ ಕ್ವಾರಿಪೀಟ್ ಪಾಲಿಕೆಯ ಜಾಗದಲ್ಲಿ ನಿರ್ಮಾಣ ಹಂತದಲ್ಲಿರುವ ಈಜುಕೊಳವನ್ನು M/S RAY CENTER ರವರಿಗೆ 03 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ಪಾಲಿಕೆಯ ಈಜು ಕೊಳವನ್ನು ಇದುವರೆವಿಗೂ ಉಪಯೋಗಿಸದೇ ಇದ್ದುದ್ದರಿಂದ ಸದರಿ ಸ್ಥಳದಲ್ಲಿ ನಡೆಯುತ್ತಿದೆ ಎನ್ನಲಾದ ಕಾನೂನು ಬಾಹಿರ ಚಟುವಟಿಕೆಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ M/s Ray CENTER ಸಂಸ್ಥೆಯು ಈಜು ಕೊಳದ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಕೊಂಡು ಪಾಲಿಕೆಯಿಂದ ಯಾವುದೇ ಹಣ ಸಹಾಯ ನಿರೀಕ್ಷಿಸಬಾರದೆಂಬ ಷರತ್ತಿಗೆ ಒಳಪಡಿಸಿಕೊಂಡು, ಮಾಸಿಕ ರೂ.8,000/- (ರೂ.ಎಂಟು ಸಾವಿರ ಮಾತ್ರ) ದಂತೆ ವಾರ್ಷಿಕ ರೂ.96,000/- (ರೂ.ತೊಂಭತ್ತಾರು ಸಾವಿರ ಮಾತ್ರ) ಗಳ ಗುತ್ತಿಗೆಯನ್ನು ನಿಗಧಿಪಡಿಸಿ 3 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡಲು ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು (ADDITIONAL SUBJECTS)

### *30]. ವಿಷಯದ ಸಂಖ್ಯೆ: ತೆಆಸ್ಥಾಸ/ 198 /2017-18*

ಆಯುಕ್ತರ ದಿನಾಂಕ: 15-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಿನಾಂಕ: 16-06-2017 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ಹುಡ್ಕೋ ಸಂಸ್ಥೆಯಿಂದ ಪಡೆದ 7 ಸಾಲದ ಸ್ಕೀಂಗಳ ಒಟ್ಟು ಸಾಲದ ಮೊತ್ತ ರೂ.1348.00 ಕೋಟಿಗಳ ಪೈಕಿ 6 ಸ್ಕೀಂಗಳ ಮೊತ್ತ ಸುಮಾರು ರೂ.923.00 ಕೋಟಿಗಳನ್ನು (20040,20060,2153,20160,20232,20336) ಗಳನ್ನು ಶೇ.8.10 ಬಡ್ಡಿ

ದರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ (SBI) ವರ್ಗಾಯಿಸಲು ಪತ್ರದ ದಿನಾಂಕ: 01.09.2017ರಲ್ಲಿನ ನಿಬಂಧನೆಗಳನ್ನು ವಿಧಿಸಿ ನೀಡಿದ ಪತ್ರವನ್ನು ಒಪ್ಪಿ ಅನುಮೋದನೆ ನೀಡಲಾಗಿರುತ್ತದೆ.

ಈ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ದಿನಾಂಕ: 01.09.2017ರ ಪತ್ರದ ಕೋಷ್ಟಕದಲ್ಲಿ ಕ್ರಮ.ಸಂ. 6ರಲ್ಲಿ ಸಾಲದ ಮರುಪಾವತಿಗೆ ಸಂಬಂಧಿಸಿದ ಭದ್ರತೆಗಾಗಿ ಪ್ರಾಥಮಿಕವಾಗಿ (Primary) ಎಸ್ಕ್ರೋ ಖಾತೆಯನ್ನು ತೆರೆಯಲು ಮತ್ತು ಪಾಲಿಕೆ ಆಸ್ತಿ ತೆರಿಗೆ ಈ ಖಾತೆಗೆ ಜಮೆಯಾಗುವಂತೆ ಮತ್ತು ಸಾಲದ ಒಟ್ಟು ಮೊತ್ತಕ್ಕೆ ಶೇ.1.30ರಷ್ಟು ಸ್ಥಿರಾಸ್ತಿಯನ್ನು (Collateral Security) ಅಡಮಾನ ಮಾಡಲು ಕೋರಿರುತ್ತಾರೆ.

ಆದ್ದರಿಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI)ಗೆ ಪಾಲಿಕೆಯ ಪರವಾಗಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಅನುಮೋದನೆ ನೀಡಲು ಹಾಗೂ ಹೀಗೆ ಸಂಗ್ರಹವಾದ ಆಸ್ತಿ ತೆರಿಗೆ ಮೊತ್ತದಿಂದ ಪಾಲಿಕೆ ಪಡೆದ ಸಾಲವನ್ನು ಮರು ಪಾವತಿಸಲು ಅನುವಾಗುವಂತೆ ಒಂದು ಎಸ್ಕ್ರೋ ಖಾತೆಯನ್ನು ತೆರೆಯಲು ಸೂಕ್ತ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 15-12-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು (ADDITIONAL SUBJECTS)

### *31]. ವಿಷಯದ ಸಂಖ್ಯೆ: ತೆಆಸ್ಥಾಸ/ 201 /2017-18*

ಆಯುಕ್ತರ ದಿನಾಂಕ: 29-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಕಾಲೇಜುಗಳಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್ ಶಾಖೆಗಳನ್ನು ತೆರೆಯುವ ಬಗ್ಗೆ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ದಿನಾಂಕ: 27.07.2017ರಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್ & ಗೈಡ್ಸ್ ಶಾಖೆಗಳನ್ನು ತೆರೆಯಲು ಅನುಮೋದನೆ ನೀಡಲಾಗಿರುತ್ತದೆ.

ಜಿಲ್ಲಾ ಕಾರ್ಯದರ್ಶಿಗಳಾದ ಸಹಾಯಕ ಆಯುಕ್ತರು (ಶಿಕ್ಷಣ) ಖಜಾಂಚಿಗಳಾದ ಸಹಾಯಕ ನಿಯಂತ್ರಕರು (ಹಣಕಾಸು) ಬೃಹತ್ ಬೆಂಗಳೂರು ಮಹನಗರ ಪಾಲಿಕೆ ಮತ್ತು ಭಾರತ್ ಸ್ಕೌಟ್ಸ್ & ಗೈಡ್ಸ್ ಶಾಖೆಯ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಇವರುಗಳ ಹೆಸರಿನಲ್ಲಿ ಜಂಟಿಯಾಗಿ ಉಳಿತಾಯ ಖಾತೆಯನ್ನು ಕೆನರಾ ಬ್ಯಾಂಕ್ ಬಿ.ಬಿ.ಎಂ.ಪಿ. ಶಾಖೆಯಲ್ಲಿ ತೆರೆಯಲು ಮತ್ತು ಈ ಖಾತೆಯಲ್ಲಿ ಜಂಟಿಯಾಗಿ ವ್ಯವಹರಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 29-12-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು (ADDITIONAL SUBJECTS)

### *32]. ವಿಷಯದ ಸಂಖ್ಯೆ: ತೆಆಸ್ಥಾಸ/ 203 /2017-18*

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದಿನಾಂಕ: 30.12.2017 ವಿವಿಧ ವಿಷಯಗಳಿಗೆ ಸಂಬಂಧಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಸಮಿತಿಯು ಸಮಾವೇಶಗೊಂಡಿದ್ದು ಸದರಿ ವಿಷಯಗಳ ನಿರ್ಧಾರದ

ನಂತರದಲ್ಲಿ 2017-18ನೇ ಸಾಲಿಗೆ ಕಲ್ಯಾಣ ಕಾರ್ಯಕ್ರಮಗಳಡಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗದ ಸಮುದಾಯದವರು ವಾಸಿಸುತ್ತಿರುವ ಪ್ರದೇಶಗಳಿಗೆ ಅವಶ್ಯವಿರುವ ವಿವಿಧ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲು ಅನುದಾನ ಕೊರತೆ ಇದ್ದು ಈ ಸಂಬಂಧ ಶಾಸಕರು ಮತ್ತು ಪಾಲಿಕೆಯ ಹಲವಾರು ಸದಸ್ಯರು ಸಮಿತಿಗೆ ಮನವಿ ಸಲ್ಲಿಸಿ ದಲಿತರು ವಾಸವಿರುವ ಸ್ಥಳಗಳಲ್ಲಿ ವಿವಿಧ ಕಾಮಗಾರಿ ಯೋಜನೆಗಳನ್ನು ಹಮ್ಮಿಕೊಳ್ಳಲು ಕಲ್ಯಾಣ ಕಾರ್ಯಕ್ರಮಗಳಡಿ ಅನುದಾನ ಹಂಚಿಕೆ ಮಾಡಲು ಕೋರಿಕೆ ಪತ್ರಗಳು ಸಲ್ಲಿಕೆಯಾಗಿರುತ್ತವೆ.

ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ ರವರು 2010-11ರಿಂದ 2017-18ನೇ ಸಾಲಿನವರೆಗೆ ವಿವಿಧ ಕಲ್ಯಾಣ ಕಾರ್ಯಕ್ರಮಗಳಡಿ ಮೀಸಲಿಟ್ಟ ಅನುದಾನ ಅದರಲ್ಲಿ ಖರ್ಚಾದ ಮೊತ್ತ ಮತ್ತು ಉಳಿಕೆಯಾದ ಮೊತ್ತದ ವಿವರಗಳನ್ನು ಲಿಖಿತವಾಗಿ ಸಮಿತಿಗೆ ಸಲ್ಲಿಸಿರುವುದನ್ನು ಅವಲೋಕಿಸಲಾಗಿ ಪಿ-2021 ವ್ಯಕ್ತಿಗತ ಸೌಲಭ್ಯಗಳು(ವೈಕ್ತಿಗತ ಸೌಲಭ್ಯ) ಲೆಕ್ಕ ಶೀರ್ಷಿಕೆಯಲ್ಲಿ ಪಕ್ಕಾ ಮನೆ ನಿರ್ಮಾಣ ಕಾರ್ಯಕ್ರಮಕ್ಕೆ 2015-16ನೇ ಸಾಲಿಗೆ ಮತ್ತು 2016-17ನೇ ಸಾಲಿಗೆ ಮೀಸಲಿಟ್ಟ ಅನುದಾನದಲ್ಲಿ ಕ್ರಮವಾಗಿ ರೂ.4685.80ಲಕ್ಷ ಮತ್ತು ರೂ.13832.48ಲಕ್ಷ ಒಟ್ಟಾರೆ ರೂ.18518.28 ಲಕ್ಷಗಳಷ್ಟು ಅನುದಾನವು ಉಳಿಕೆಯಾಗಿರುತ್ತದೆ. ಈ ಉಳಿಕೆ ಮೊತ್ತದಲ್ಲಿ ರೂ.10000.00ಲಕ್ಷ ಅನುದಾನವನ್ನು ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ವರ್ಗದ ಸಮುದಾಯದವರು ವಾಸವಿರುವ ಪ್ರದೇಶಗಳಲ್ಲಿ ಅವಶ್ಯವಿರುವ ವಿವಿಧ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕಾಲೋನಿಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ ಯೋಜನೆಗಳಿಗೆ ಉಪಯೋಗಿಸಿಕೊಳ್ಳಲು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆ ಸದಸ್ಯರು ಸಲ್ಲಿಸಿರುವ ಮನವಿಗಳ ಪ್ರಕಾರ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ವರ್ಗದ ಸಮುದಾಯದವರು ವಾಸವಿರುವ ಪ್ರದೇಶಗಳಲ್ಲಿ ಕಾಂಕ್ರಿಟ್ ರಸ್ತೆ, ಒಳಚರಂಡಿ ಇನ್ನಿತರೆ ಸಮುದಾಯದ ಮೂಲಭೂತ ಸೌಕರ್ಯಗಳ ಕಾಮಗಾರಿ ಕಾರ್ಯಕ್ರಮಗಳಿಗೆ ಪಿ-2021 ವ್ಯಕ್ತಿಗತ ಸೌಲಭ್ಯಗಳು(ವೈಕ್ತಿಗತ ಸೌಲಭ್ಯ) ಲೆಕ್ಕ ಶೀರ್ಷಿಕೆಯಲ್ಲಿ ಪಕ್ಕಾ ಮನೆ ನಿರ್ಮಾಣ ಕಾರ್ಯಕ್ರಮಕ್ಕೆ 2015-16ನೇ ಸಾಲಿಗೆ ಮತ್ತು 2016-17ನೇ ಸಾಲಿಗೆ ಮೀಸಲಿಟ್ಟ ಅನುದಾನದಲ್ಲಿ ಕ್ರಮವಾಗಿ ರೂ.4685.80 ಲಕ್ಷ ಮತ್ತು ರೂ.13832.48 ಲಕ್ಷ ಒಟ್ಟಾರೆ ರೂ.18518.28 ಲಕ್ಷಗಳಷ್ಟು ಉಳಿಕೆಯಾಗಿರುವ ಮೊತ್ತದಲ್ಲಿ ರೂ.10000.00

ಲಕ್ಷಗಳಷ್ಟು ಅನುದಾನವನ್ನು ಪಿ-1878 ಭಾಗ್ಯಜ್ಯೋತಿ ಬೆಳಕು, ಸೂರು / ನೀರು ಯೋಜನೆ / ಇತರೆ ಕಾಮಗಾರಿಗಳು ಲೆಕ್ಕ ಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಂಡು ಸದರಿ ಅನುದಾನವನ್ನು ಅವಶ್ಯವಿರುವ ವಾರ್ಡ್ ಮತ್ತು ಕಾಮಗಾರಿ ಯೋಜನೆಗಳಿಗೆ ಅನುಗುಣವಾಗಿ ಸಮಿತಿಯ ತೀರ್ಮಾನಕ್ಕೆ ಒಳಪಟ್ಟು ಅನುದಾನ ಹಂಚಿಕೆ ಮಾಡುವ ಸಲುವಾಗಿ ತೀರ್ಮಾನಿಸಿ, ಸದರಿ ನಿರ್ಣಯವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಿರುವ **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 30-12-2017ರಂದು ನಡೆದ ಸಭೆಯಲ್ಲಿ ತೆಗೆದುಕೊಳ್ಳಲಾದ ಸ್ವಯಂ ನಿರ್ಣಯ.**

**ನಿರ್ಣಯ: ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 30-12-2017ರ ಸ್ವಯಂ ನಿರ್ಣಯವನ್ನು ಒಪ್ಪುತ್ತಾ, ಆಯುಕ್ತರು ಅಗತ್ಯ ಕ್ರಮಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು (ADDITIONAL SUBJECTS)

### *33]. ವಿಷಯದ ಸಂಖ್ಯೆ: ತೆಆಸ್ಥಾಸ/ 204 /2017–18*

ಪ್ರಧಾನ ಅಭಿಯಂತರರ ದಿನಾಂಕ: 02.01.2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ ಸಂಖ್ಯೆ –37 ರ ಯಶವಂತ ಪುರ ಉಪ–ವಿಭಾಗ ವ್ಯಾಪ್ತಿಯಲ್ಲಿ 2017–18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮನೆ ನಿರ್ಮಾಣಕ್ಕಾಗಿ ಪಿ–3157 ಅಡಿಯಲ್ಲಿ ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ/ಅಲ್ಪ ಸಂಖ್ಯಾತ/ಅರ್ಥಿಕ ಹಿಂದುಳಿದ ವರ್ಗಾದವರಿಗೆ ವೈಯಕ್ತಿಕ ಮನೆ ನಿರ್ಮಾಣದ ಅಡಿಯಲ್ಲಿ ರೂ.2200.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ತದನಂತರ ಕಾ.ಪಾ.ಅ (ರಾಜರಾಜೇಶ್ವರಿ ನಗರ ವಿಭಾಗ) ರವರು ಕ್ರಮ ವಹಿಸಿ ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಗುತ್ತಿಗೆದಾರರನ್ನು ನೇಮಿಸಿ ಕಾರ್ಯದೇಶ ನೀಡಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl no | Name of work | Head of account | Estimated cost in lakhs | Name of agency | Tender amt in lakhs | Percentage |
|---|---|---|---|---|---|---|
| 1 | Proposed EWS housing complex at 1st main road BK nagar slum yeshwanthpua in ward no 37, Block D-4A (037-17-000004) | P-3157 | 196.60 | R.R infra tech | 219.54 | 14.95%(+) |
| 2 | Proposed EWS housing complex at 1st main road BK nagar slum yeshwanthpua in ward no 37, Block D-4 (037-17-000006) | P-3157 | 413.40 | R.R infra tech | 464.38 | 14.95%(+) |
| 3 | Proposed EWS housing complex at 1st main road BK nagar slum yeshwanthpua in ward no 37, Block B2-A (037-17-000002) | P-3157 | 274.70 | R.R infra tech | 306.19 | 14.95%(+) |
| 4 | Proposed EWS housing complex at 1st main road BK nagar slum yeshwanthpua in ward no 37, Block A-1 (037-17-000001) | P-3157 | 364.50 | R.R infra tech | 408.82 | 14.95%(+) |
| 5 | Proposed EWS housing complex at 1st main road BK nagar slum yeshwanthpua in ward no 37, Block B-2 (037-17-000005) | P-3157 | 375.30 | R.R infra tech | 420.31 | 14.95%(+) |

ಮುಖ್ಯ ಲೆಕ್ಕಾದಿಕಾರಿಗಳು ವರದಿ ಮಾಡಿರುವಂತೆ ಸದರಿ ಲೆಕ್ಕ ಶೀರ್ಷಿಕೆ (ಪಿ–3157) ಅಡಿಯಲ್ಲಿ 2017–18ನೇ ಸಾಲಿನ ಅಯವ್ಯಯದಲ್ಲಿ ಯಾವುದೇ ಅನುದಾನ ನಗದಿಯಾಗಿರುವುದಿಲ್ಲ. ಅದ್ದರಿಂದ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದ ಅನುದಾನ ಹೊರತುಪಡಿಸಿ, ವಿಭಾಗದಲ್ಲಿ ಒಟ್ಟಾರೆ ಉಳಿತಾಯವಾಗುವ ಅನುದಾನದಲ್ಲಿ ಮರು ಹೋಂದಾಣಿಕೆ ಮಾಡಿ ಅನುದಾನ ಒದಗಿಸಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಲು ಶಿಫಾರಸ್ಸು ಮಾಡಿರುತ್ತಾರೆ.

ಜಂಟಿ ಅಯುಕ್ತರು (ರಾ.ರಾ.ನಗರ) ರವರು ವರದಿ ಮಾಡಿರುವಂತೆ ಸದರಿ ಕಾಮಗಾರಿಗೆ 2017–18 ನೇ ಸಾಲಿನ ವೈಯಕ್ತಿಕ ಮನೆ ನಿರ್ಮಾಣದ ಲೆಕ್ಕ ಶೀರ್ಷಿಕೆ ಪಿ–3314 ಅಡಿಯಲ್ಲಿ ರೂ 1000.00 ಲಕ್ಷಗಳ ಅನುದಾನ ನಿಗದಿ ಪಡಿಸಿದ್ದು, ಈ ಅನುದಾನವನ್ನು ಮೇಲ್ಕಾಣಿಸಿದ ಕಾಮಗಾರಿಗೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಮುಂದುವರೆದಂತೆ, ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ಅಭಿಪ್ರಾಯಿಸಿದಂತೆ 2017–18 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3314 ಅಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಅರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ವೈಕ್ತಿಕ ಮನೆಗಳ ನಿರ್ಮಾಣಕ್ಕೆ ನಿಗದಿಪಡಿಸಿದ ರೂ 1000.00 ಲಕ್ಷಗಳನ್ನು ಮೀಸಲಿರಿಸಿದ್ದು, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಈಗಾಗಲೆ ಜಾಬ್ ಸಂಖ್ಯೆ ನಿಡಲಾಗಿದ್ದು, ಹೆಚ್ಚುವರಿ ಅವಶ್ಯಕತೆ ಇದ್ದಲ್ಲಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಬೇಕಾಗಿರುತ್ತದೆ ಎಂದು ಅಭಿಪ್ರಾಯಿಸಿದ್ದು,

2017–18 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3157 ಮತ್ತು 3314 ಅಡಿಯಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ, ಈಗಾಗಲೆ ಮೇಲ್ಕಾಣಿಸಿದ ಕಾಮಗಾರಿಗಳಿಗೆ 2017–18 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3157 ಅಡಿಯಲ್ಲಿಯೇ ಮರು ಹೊಂದಾಣಿಕೆ ಮಾಡಿಕೊಂಡು ಅನುದಾನ ನೀಡುವ ಬಗ್ಗೆ ಮಾನ್ಯ ಆಯುಕ್ತರು ಮೇಲ್ಕಂಡ ಉಲ್ಲೇಖದ ಅ'ಡಿಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, 2017–18ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3157 ಅಡಿಯಲ್ಲಿ ಮೇಲ್ಕಾಣಿಸಿದ ಕಾಮಗಾರಿಗಳಿಗೆ ಅನುದಾನ ನಿಗದಿಯಾಗಿಲ್ಲದೆ ಇರುವುದರಿಂದ ಹಾಗು ಜಂಟಿ ಆಯುಕ್ತರವರ ಶಿಪಾರಸ್ಸಿನಂತೆ 2017–18 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3314 ಅಡಿಯಲ್ಲಿ ಮೀಸಲಿರಿಸಿದ ಅನುದಾನವಾದ ರೂ.1000.00 ಲಕ್ಷಗಳ ಅನುದಾನವನ್ನು ಈಗಾಗಲೇ ಬೇರೆ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುವುದರಿಂದ, ಈಗಾಗಲೇ ಮೇಲ್ಕಾಣಿಸಿದ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ ಪಿ–3157 ನೀಡಿರುವ ಜಾಬ್ ಸಂಖ್ಯೆ ಅಡಿಯಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಅನುದಾನ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 02–01–2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

(ಮಹದೇವ. ಎಂ)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**